<u>ಸಾಧನ ಸಂಗಮದಲ್ಲಿ</u> –

ಅಜ್ಜ – ಈ ಎಲ್ಲಾ ಪಾಂಡಿತ್ಯ ಯಾಕೇಂತ ನಾವು ಕೇಳೋದು. ಮತ್ತೊಬ್ಬರಿಗೆ ಭಾಷಣ ಮಾಡ್ಲಿಕ್ಕಲ್ವ. ತನ್ನ ಸ್ವಂತ ಅನುಭವಕ್ಕೆ ಪಾಂಡಿತ್ಯವೇ ಬೇಡ. ಅವನ ನಡತೆ . . . ನಮ್ಗೆ ನೆನ್ನೆ ಮೊನ್ನೆ ನೋಡಿ ಪ್ರಶ್ನೆಗಳು.. . . ನಮ್ಗೆ ಉತ್ತರ ಕೊಟ್ಟು ಸಾಕಾಗಿದೆ. ಪಟ್ಟಾಭಿಯವರ ತುಂಬಾ ಜನ್ರದ್ದು ಇತ್ತು ಬೇರೆ ಬೇರೆ ಕಡೆಯಲ್ಲಿ . . .

ಒಬ್ಬರು – ಸಾಕಾಯ್ತು.

ಅಜ್ಜ – ಸಾಕಾಯ್ತು. (ನಗು). ನಿನ್ನ ಹೆಸ್ರು?

ಒಬ್ಬರು – ಮಂಜುನಾಥ್.

ಒಬ್ಬರು – ವಿದ್ಯಾಭ್ಯಾಸದ ಸಮಯದಲ್ಲೇ ಈ ಪ್ರಶ್ನೆಗಳಿಗೆಲ್ಲಾ ಉತ್ತರ ಕಂಡುಕೊಳ್ಳಬಹುದಲ್ಲ. ವಿದ್ಯಾಭ್ಯಾಸ ಮುಗೀಲಿ ಅಂತ ಕಾಯೋದ್ಯಾಕೆ?

ಅಜ್ಜ – ಕಾಯ್ಬೇಕೂಂತೇನೂ ಇಲ್ಲ. ಆದ್ರೆ ಉತ್ತರ ಸಿಕ್ಕಿಬಿಟ್ರೆ, ವಿದ್ಯಾಭ್ಯಾಸಕ್ಕೆ ತೊಂದರೆ ಬರ್ತದೆ. ಅಷ್ಟೇನೇ. ಮೊದ್ಲೇ ಬೇಕು. ಆಮೇಲಲ್ಲ. ಮೊದ್ಲೇ ಬೇಕು. ಇದು ನಿಮಗೆ ದಾರಿ ಸಿಕ್ಕದಿದ್ರೆ ಅದು ಅರ್ಥದಲ್ಲೇ ಆಯ್ತಲ್ಲ. ಹಾಗಾಗಿ ವಿದ್ಯಾಭ್ಯಾಸ ಮುಗೀಲಿ. ಜೊತೆಗೇ ಮಾಡ್ತಾ ಇದ್ದು ವಿದ್ಯಾಭ್ಯಾಸ ಮುಗೀವಾಗ ಉತ್ತರ ಸಿಕ್ತದೆ.

ಒಬ್ಬರು – ಅಲ್ಲ. ಅದು ಇನ್ನೂ ಜಾಸ್ತಿ ಆಗುವ ಸಾಧ್ಯತೆ ಉಂಟಲ್ಲ.

ಅಜ್ಜ – ಹೌದು . . . ನೀನು ಉಪಾಧ್ಯಾಯನೇ ಆಗಿಬಿಡ್ತೀಯ. (ನಗು).

ನೀನು ಉಪಾಧ್ಯಾಯನೇ ಆಗಿ ಬಿಡ್ತೀಯ. ವಿದ್ಯಾರ್ಥಿಯೇ ಉಪಾಧ್ಯಾಯನಾಗೋದು. ಅವ ಮೊದ್ಲು ಹೀಗೇ ಇದ್ದ. ಹಾಗಾದ್ರೆ ಏನು ಕಲೀಬೇಕು?

ವಿದ್ಯೆಯಲ್ಲಿ ಎರಡುಂಟಂತೆ ಅಲ್ಲ.

ಒಂದು ಆಧ್ಯಾತ್ಮಿಕ ವಿದ್ಯೆ. ಒಂದು ವ್ಯವಹಾರಿಕ ವಿದ್ಯೆ. ಹ್ಞಾಂ.

ನೀನು ಕೇಳಿದ ಪ್ರಶ್ನೆ ಆಧ್ಯಾತ್ಮಿಕಕ್ಕೆ ಸಂಬಂಧಪಟ್ಟದಾ? ಹ್ಞಾಂ . . . ಅಲ್ಲ. ಆ ವಿದ್ಯೆ ಕಲಿಯಪ್ಪ. . . ಮತ್ತೆ ನೀನು ಈ ಜಗತ್ತಿಗೇ ಮಾದರಿರೂಪ ಆಗುವ ಸಾಧ್ಯತೆ ಉಂಟು ನೀವದ್ರಲ್ಲಿ ಪಾಸಾಗಿಬಿಟ್ರೆ. ಪಾಸಾಗು ನೋಡುವ. ಹ್ಞಾಂ ಹೌ. . . ದು. . . . ಆದ್ರಿಂದ ಇದಕ್ಕೆ ಹೆಚ್ಚು ಮಹತ್ವ ಬೇಡ. ಅದ್ರಲ್ಲೇ ಹೋದಾಗ ಅದ್ರಲ್ಲಿ ಸಿಕ್ಲಿ ನಿಮಗೆ. ಸಿಕ್ಲೀಂತ ಹೇಳೋದು. ನಾವು ಅರ್ಹತೆಯನ್ನು ಪಡಕೊಳ್ಳುವ. ಸಿಕ್ಲಿಕ್ಕೆ.

ಆ ಅರ್ಹತೆಯನ್ನು ಹೊಂದಲಿಕ್ಕೆ ನಮಸಿನಲ್ಲಿ ಸದಾ ಕಾಲವೂ ಅದೇ ವಿಚಾರ ಇಲ್ಲಿ. ಪ್ರಶ್ನೆ ಗ್ರಿಶ್ನೆ ಅದು ಇದು ಎಲ್ಲಾ ಇದ್ರೆ ಸಿಕ್ಕೋದಿಲ್ಲ. ಮೌನದಲ್ಲಿ ಅದನ್ನು ನೋಡು. ಆ ಪ್ರಶ್ನೆ ಕೇಳಿದವ ಯಾರೂಂತ ತಿಳ್ಕೋ ಮೊದಲು. ಆಮೇಲೆ ಗೊತ್ತಾಗ್ತದೆ.

ನೀನು ಪ್ರಶ್ನೆ ಹಾಕಿದಿಯಲ್ಲ ಏನೂಂತ – ಕೋಪ ಇಲ್ಲಲ್ಲ. . . ಕೋಪ ಇದ್ರೆ ನಮಗಾಗೋದಿಲ್ಲ. ಕೆಲವು ಜನ ಮೊನ್ನೆಯೆಲ್ಲ ಕೋಪ ಮಾಡಿಬಿಟ್ರು. ಛೆ! . . . ವರ್ತಮಾನ ಎಲ್ಲಾ ಬೇರೆ ಕಡೆ ಹೋಗಿ ಪ್ರಶ್ನೆ ಬಂತು ಅಲ್ಲಿ. . . ಮತ್ತೆ ಎರಡ್ನೇ ಪ್ರಶ್ನೆ ಕೇಳೂಂತ್ಹೇಳುವಾಗ ಅವ ಕೇಳ್ಳೇ ಇಲ್ಲ . . . . . .

ಒಬ್ಬರು – ನಮ್ಮ ಅಂತರ್ಯವನ್ನು ನೋಡುತ್ತಾ ನಾವು ಅನುಭವಿಸ್ಬೇಕಾದ್ರೆ ಏನು ಮಾಡ್ಬೇಕು. ಹೇಗೆ ಮಾಡ್ಬೇಕು ನಾವು?

ಅಜ್ಜ – ಅಂಥದ್ದು ಮಾಡ್ಬೇಕೂಂತ . . . ಅನುಭವ ಮಾಡ್ಬೇಕೂಂತ್ಹೇಳಿ ಉಂಟಾ? ಅಂತ ಅನುಭವ ಮಾಡ್ಬೇಕೂಂತ ಉಂಟಾ.

ಒಬ್ಬರು – ಅಲ್ಲ. ಎಲ್ರೂ . . .

ಅಜ್ಜ – ಅಲ್ಲ, ಈಗ ಪ್ರಶ್ನೆ ಕೇಳುವವರಿಗೆ ಉಂಟಾಂತ ಹೇಳಿ. ಎಲ್ರ ಸಂಗತಿ ಬಿಡುವ. ನಮಗೆ ಬೇಕಾಂತ – ಕೋಪ ಮಾಡ್ಬೇಡಿ. ಏನು ತಿಳೀಬೇಕೂಂತ ಉಂಟಾ? ಯಾವುದನ್ನ.

ಒಬ್ಬರು – ಅಂತರ್ಯದ ಆನಂದವನ್ನು. ಅಂತರ್ಯದಲ್ಲಿ ಆನಂದ ಇದೇಂತ ಹೇಳಿದಿರಲ್ಲ. ಅದನ್ನು ಅನುಭವಿಸುವ ಆಸೆ ಇದೆ ನಮಗೆ. ಅದ್ಕೆ ಏನು ಮಾಡ್ಬೇಕು?

ಅಜ್ಜ – ಆಸೆ ಬಿಟ್ಟುಬಿಡಿ. ಆನಂದ ಉಂಟೂಂತ್ಹೇಳಿ ಧೈರ್ಯ ಉಂಟಾ? ನಾವು ಹೇಳಿಯಲ್ಲ.

ಒಬ್ಬರು – ನಂಬಿಕೆ ಇದೆ.

ಅಜ್ಜ – ನಂಬಿಕೆ ಇದೆ ಅಲ್ಲ. ಆ ಆಸೆ ಬಿಟ್ಟುಬಿಡಿ. ಅಲ್ಲಿಯೇ ಸಿಕ್ತದೆ ನಿಮ್ಗೆ ದಾರಿ. ಎಷ್ಟರವರೆಗೆ ಆಸೆ ಉಂಟೋ ಅದು ಸಿಕ್ಕುವುದಿಲ್ಲ. ನೀವು ಆಸೆ ಬಿಟ್ಟುಬಿಡಿಯಪ್ಪಾ. ಅಲ್ಲಿ ಆಸೆಯೇ ಇಲ್ಲ. ಆನಂದದಲ್ಲಿ ಆಸೆಯೇ ಇಲ್ಲ. ಈ ಆಸೆ ಹೋದಾಗ ಅಲ್ಲಿಯೇ ಪ್ರಾಪ್ತಿ ಆನಂದ. ತಯಾರಾಗಿ ಉಂಟು. ಹುಡುಕೋದು, ಪ್ರಯತ್ನ, ದಾರಿ ಒಂದೂ ಬೇಡ. ಅದಕ್ಕೇ ನಾವು ಹೇಳೋದು ಆ್ಞಂ . . . ಖಾಲಿಯಾಗೀಂತ್ಹೇಳಿ. ಯಾವುದನ್ನು . . . ಮನಸ್ಸನ್ನು ಸಂಪೂರ್ಣ ಖಾಲಿ ಮಾಡಿದ್ರೆ ಅಲ್ಲಿ ಆನಂದ ಉಂಟು. ಆನಂದ ಉಕ್ಕಿ ಬರ್ತಾ ಉಂಟು. ಅದಕ್ಕೆ ತಡೆ ಉಂಟು. ಆಸೆ. ಆ ತಡೆ ತೆಗೀರಿ ನೀವು.

ಒಬ್ಬರು – ಆ ನಂಬಿಕೆ ಮೇಲೆ ನಿಲ್ಬೇಕೂಂತ.

ಅಜ್ಜ – ನಂಬಿಕೆ ಮೇಲೆ ನಿಲ್ಲೋದಲ್ಲ . . . ಅದು ನಂಬಿಕೆ ನಂಬಿಕೆ ಆಯ್ತು. ಅದು ಈಗ ದೇವರಿದ್ದಾನೇಂತ ನಂಬಿಕೆ ಎಲ್ರಿಗೂ ಗೊತ್ತುಂಟು. . . ಅವ ಕೇಳ್ತಾನೆ ಎಲ್ಲಿದ್ದಾನೇಂತ. ನಂಬಿಕೆ ಎಲ್ಲಿ ಉಂಟು. ಆ್ಞಂ.

ಒಬ್ಬರು – ನಮ್ಮ ಮೇಲೆ ನಮಗೆ ವಿಶ್ವಾಸ ಇದ್ರೆ ಆ ಆನಂದದಲ್ಲಿ ಕಂಟಿನ್ಯುವಸ್ ನಿಲ್ಲಿಕ್ಕೇ ಸಾಧ್ಯ ಆಗುತ್ತೆ.

ಅಜ್ಜ – ಆನಂದ ಅಂದ್ರೆ ಏನು? ಆನಂದ ಎಂದರೆ ಏನೂಂತ ಅರ್ಥಮಾಡಿಕೊಂಡಿದ್ದೀರೀಂತ ಹೇಳಿ.

ಒಬ್ಬರು – ಆಸೆ ಇಲ್ಲದ ಸ್ಥಿತಿ.

[ಅಜ್ಜ – . . . . . . . . . . . . ]

ಅಜ್ಜ – ಆ್ಞಂ . . .

ಒಬ್ಬರು – ಅದೇ! ಏನೂ ಇಲ್ದೆ ಇರೋದು.

ಅಜ್ಜ – ಹೀಗೇ ಒಂದೊಂದು ಪ್ರಶ್ನೆ ಬರ್ತಾ ಇದ್ರೆ ನಾವು ಆಳಕ್ಕೆ ಹೋಗ್ಬೇಕಾಗ್ತದೆ. ನಮ್ಮನ್ನು ಆಳಕ್ಕೆ ಕೊಂಡುಹೋಗಿಬಿಡ್ತೀರಿ . . . (ನಗು) ಅದು ಆಳದಲ್ಲುಂಟು. ಮೇಲಿನ ಕಸ ಎಲ್ಲಾ ತೆಗ್ದುಬಿಟ್ರೆ . . . . ನೋಡಿ. ಇಲ್ಲಿ . . . . (D.R.) ತುಂಬಾ ಕಸ ಉಂಟು. ಕಸ ಎಲ್ಲಾ ತೆಗ್ದುಬಿಟ್ರೆ ಕ್ಲೀನ್ ಆಯ್ತು. ಅದು ಮೊದ್ಲೇ ಕ್ಲೀನೇ ಇತ್ತು. ಕಸ

ಬಿತ್ತು. ಹಾಗಾದ್ರೆ ನಮ್ಮ ಕೆಲಸ ಏನು? ಆ ಕಸ ತೆಗ್ದು ಬಿಡೋದು. ಆನಂದ ಅಲ್ಲಿಯೇ ಉಂಟು. ಆನಂದಕ್ಕಾಗಿ ಹುಡುಕೋದು ಏನೂ ಬೇಡ. ಆ ಕಸ ತೆಗ್ದು ಬಿಡಿ. ಹ್ಞಂ. ಅದು ತೆಗ್ದುಬಿಟ್ರೆ ಮತ್ತೆ ಉಳಿಯೋದೇನು.

ಒಬ್ಬರು – ಆನಂದ.

ಅಜ್ಜ – ಆsssನಂದ. . . . ಹ್ಞಾಗಾರೆ ಇದು ಕರ್ಮ ಗಿರ್ಮ ಅದು ಇದು ಎಲ್ಲಾ ಬೇಕೂಂತ ಹೇಳೋದು. ಆ ಕಸ ತೆಗೀಲಿಕ್ಕೆ. ಆ್ಞಂ. ಕಸ ತೆಗೀಲಿಕ್ಕೆ. ಕಸ ತೆಗ್ದಾದಮೇಲೆ ಅವ ನೋಡ್ತಾನೆ. ಅದು ಶೋಧನೆ.

ಒಬ್ಬರು – ಕಸ ಹೇಗ್ಬಂತು ತಾತ?

ಪಟ್ಟಾಭಿ – ಆ ಪ್ರಶ್ನೆ ಬೇಡ. ಮೊದ್ಲು ಕಸ ತೆಗಿ. ಆಮೇಲೆ ಈ ಪ್ರಶ್ನೆ ಹಾಕು.

ಅಜ್ಜ – ನೋಡಿ, ನಿನ್ನ ಪ್ರಶ್ನೆಗೆ ಉತ್ತರ ಉಂಟು. ಆದ್ರೆ ನಾವೀಗ ನಿನ್ನನ್ನು ನೋಡ್ತಾ ಉಂಟು. ಈ ಪ್ರಶ್ನೆ ಕೇಳುವವ ಯಾರಪ್ಪಾ. ಸ್ವಲ್ಪ ಪರಿಚಯ ಮಾಡಿಕೊಡು. ಆಮೇಲೆ ನಿನ್ನ ಪ್ರಶ್ನೆಗೆ ಉತ್ತರ ಹೇಳ್ತೇವೆ.

ಒಬ್ಬ – ಮಂಜುನಾಥ.

ಅಜ್ಜ – ಒಪ್ಪೋದಿಲ್ಲ. ನಾವು ಒಪ್ಪೋದಿಲ್ಲ. ನಮ್ಮನ್ನು ನೀನು ಸಮಾಧಾನ ಪಡಿಸ್ಬೇಕು. ಆಮೇಲಿ ನಿನ್ನ ಪ್ರಶ್ನೆಗೆ ಉತ್ತರ. ಮೊದ್ಲು ನಮಗೆ ಊಟ ಹಾಕು. ನಮ್ಮ ಹೊಟ್ಟೆ ತುಂಬಿದಮೇಲೆ ನಿಂಗೆ ಬಡಿಸ್ಲಿಕ್ಕೆ ನಮಗೆ ಸಾಮರ್ಥ್ಯತೆ ಬಂತು. ನಾವು ವೀಕ್‌ನೆಸ್ ಇದ್ದೇವೆ. ಈಗ ಸ್ವಲ್ಪ ಬಲ ಕೊಡು. . . . . . ಹ್ಞಂ.

ಪಟ್ಟಾಭಿ – ಸಾಕು ಅನ್ಸತ್ತೆ. ಈ ಪ್ರಶ್ನೆಗಳನ್ನು ನಾವು ಹಾಕ್ಲಿಕ್ಕೆ ಹೊರಟಾಗ ಎಲ್ಲೋ ಒಂದು ಕಡೆ ನಾವು ಇತಿಮಿತಿಗಳನ್ನು ಮೀರಿ ಹೋಗ್ಲಿಕ್ಕೆ ಶುರುಮಾಡ್ತೇವೆ.

ಅಜ್ಜ – ಹೌದು.

ಪಟ್ಟಾಭಿ – ಆಗ ಪ್ರಶ್ನೆ ಯಾವುದೂ ನಮ್ಮ ಪ್ರಶ್ನೆ ಆಗಲ್ಲ.

ಅಜ್ಜ – ಹೌದೂ . . . ಯಾವುದೂ ನಿಲ್ಲುದಿಲ್ಲ. ಪ್ರಶ್ನೆ. . . ಒಂದೇ ಮಾನವ ಜನಾಂಗಕ್ಕೆ ಒಂದೇ ಪ್ರಶ್ನೆ.

ಪಟ್ಟಾಭಿ – ಒಂದುಕಡೆ ಪ್ರಾಮಾಣಿಕ ಪ್ರಶ್ನೆಗಳು ಶುರುವಾಗುತ್ತವೆ. ಅಲ್ಲಿಂದ ತಲೆಹರಟೆ ಪ್ರಶ್ನೆಗಳು ಪ್ರಾರಂಭವಾಗುತ್ತವೆ. ಆವಾಗ ಯಾವುದಕ್ಕೂ ಉತ್ತರ ಸಿಕ್ಕೋದಿಲ್ಲ. ಮೂಲ ಪ್ರಶ್ನೆಯೇ ದುರ್ಬಲವಾಗತ್ತೆ.

ಅಜ್ಜ ಹೌss. . .ದು. . .

ಪಟ್ಟಾಭಿ – ಯಾವತ್ತೂ ಮೂಲಪ್ರಶ್ನೆಯನ್ನು ದುರ್ಬಲ ಮಾಡ್ಬಾರ್ದು. ಮಾಡ್ತೂಂದ್ರೆ ಉತ್ತರ ಸಿಕೋದಿಲ್ಲ.

ಅಜ್ಜ – ಉತ್ತರ ಸಿಕ್ಕೋದಿಲ್ಲ. . . ಗೊಂದಲ ಆಗಿ ಹೋಗ್ತದೆ. ಉತ್ತರ ಸಿಕ್ಕೋದಿಲ್ಲ ಯಾಕೇಂದ್ರೆ ಅದ್ರು ಪ್ರಶ್ನೆಯೇ ಅಲ್ಲಾಂತ್ಹೇಳಿ . . . . . (D.R.) . . . . .

ನೀವು ಸರಿ ಬಂದ್ರೆ ನೋಡಿ ನಮ್ಮ ಗೊಂದಲ ಹೋಯ್ತು. ಸರಿಯಾಯ್ತು.

ಪಟ್ಟಾಭಿ – ಅಜ್ಜನ ಜೊತೆ ನಾವು ಒಂದು ವಿಶೇಷವನ್ನು ಗುರುತಿಸಬೇಕು. ಏನೂಂದ್ರೆ ಪ್ರಶ್ನೆ ಎಷ್ಟು ತೀಕ್ಷ್ಣವಾಗಿದೆಯೋ ಎಷ್ಟು ಆಳವಾಗಿದೆಯೋ ಎಷ್ಟು ನಂಗೆ ಅಗತ್ಯ ಇದೆಯೋ ಅದಕ್ಕೆ ತಕ್ಕ ಹಾಗೆ ಅಲ್ಲಿಂದ ಉತ್ತರ ಬರ್ತಾ ಹೋಗ್ತದೆ. ನನ್ನ ಪ್ರಶ್ನೆ ಸುಮ್ನೆ ಮೇಲ್ಮಟ್ಟದ ಕುತೂಹಲದ ಪ್ರಶ್ನೆ ಆಗಿದ್ರೆ ಅಲ್ಲೂ ಕುತೂಹಲದ ಉತ್ತರ ಬರ್ತಾ

ಹೋಗತ್ತೆ. ಅದು ನಮಗೆ ಸಮಂಜಸ ಆಗಲ್ಲ. ನನ್ನ ಪ್ರಶ್ನೆ ಬರೀ ಕೇಳ್ಬೇಕು ಅನ್ನೋ ಹಾಗಿದ್ರೆ ಅಲ್ಲೂ ಬರೀ ಹೇಳ್ಬೇಕೂ ಅನ್ನೋ ಉತ್ತರ ಬರತ್ತೆ. ಆದ್ರೆ ನಿಜವಾದ ಉತ್ತರ ಆಗಲ್ಲ. ಹಾಗಾಗಿ ಪ್ರಶ್ನೆ ನಮ್ಮಲ್ಲಿ ನಿಜಕ್ಕೂ ಕಾಪ್ಡಾಕು. ಒದ್ದಾಡ್ಬೇಕು. ಒದ್ದಾಡ್ತಾ ಸುಮ್ನೆ ಕೂತ್ರೆ ಸಾಕು. ಮೌನದಲ್ಲೇ ಉತ್ತರ ಸಿಗತ್ತೆ.

ಅಜ್ಜ – ನೀವು ಪ್ರಶ್ನೆ ಕೇಳೋದೇ ಬೇಡ. ಯಾವುದು ಆ ಪ್ರಶ್ನೆ, ಗೊಂದಲ. ಉತ್ತರ ಮನಸ್ಸು ಇದಾಗುವಾಗ ನೋಡಿ ಅಲ್ಲಿ ಉತ್ತರ ಕೊಡುವವ ಒಬ್ಬ ಸಿಕ್ತಾನೆ. ವ್ಯಕ್ತಗ್ಗೇ ಅವ್ಯಕ್ತಗ್ಗೇ . . . . . (D.R.) (ನಗು)

ಅಜ್ಜ – ಹಾಗಾಗಿ ನಮ್ಗೆ ಇಂಥದ್ದೆಲ್ಲಾ ಆಗಾಗ್ಗೆ ಬರೋದು. ನಮ್ಮಲ್ಲಿ ಸ್ಟಾಕಿಲ್ಲ. ನಾವು ಯಾವಾಗ್ಲೂ ಖಾಲಿ. ಬರ್ತಾ ಉಂಟದು. ಅದೇ ಆನಂದಮಯ ಜೀವನ ಎಂಬುದು ಬರ್ತಾ ಉಂಟು. ಸ್ಟಾಕಿದ್ರೆ ಗೊಂದಲ. ಏನೋ ಖಾಲಿ ಮಾಡಪ್ಪಾ. ವಿಚಾರ ಯಾವುದು ಬೇಕೋ ಅದು ಬರ್ತದೆ. ಹೊಟ್ಟೆ ಖಾಲಿ ಇದ್ದಾಗ ಯಾವುದು ಬೇಕೋ ಅದಾಗುತ್ತದೆ. ಇದು ಹೊಟ್ಟೇಯೇ ಫುಲ್ ಇದ್ರೆ ಆಹಾರ ಸಿಕ್ಕೋದಿಲ್ಲ. ಸಿಕ್ಕಿದ್ರೂ ಬೇಡ – ವಾಂತಿ ಅವನಿಗೆ. . . . ಕೊಟ್ಟವನಿಗೆ ಖರ್ಚು ಇವನಿಗೆ ವಾಂತಿ. ಯಾವುದಕ್ಕೂ ನಿಮ್ಗೆ ಹಸಿವೆಯಾಗ್ಲಿ. ಊಟ ಕೊಡುವವರು ಇದ್ದಾರೆ. ಯಾರಿಗೆ ಹಸಿವು. ಎಲ್ಲಿಗೂ ಕೊಡೋದಿಲ್ಲ. ಅವರು ಯಾಕೆ ವಾಂತಿ ಬಿಡ್ತಾರೆ. . . ಯಾರಿಗೆ ಹಸಿವೆಯಾಗಿದೆ ಅಲ್ಲಿ ಅಂದ್ರೆ ಆಧ್ಯಾತ್ಮಿಕ ಹಸಿವೆಯಾಗಿದೆ ಅವರಿಗೆ ಅಲ್ಲಿ ಆಗ್ಲೇ ಬೇಕು. ಇಲ್ಲವಾದ್ರೆ ಹಸಿವು ಆಗ್ಲಿಲ್ಲ ಅಂತ ಲೆಕ್ಕ.

ಅಜೀರ್ಣ ಆದವನಿಗೆ ಅವ ಕೊಡೋದಿಲ್ಲ. ಅಜೀರ್ಣವಾದವ ಹೇಳ್ತಾನೆ ರುಚಿ ಇದ್ರೆ ಸ್ವಲ್ಪ ತಿಂದು ಬಿಡುವಾಂತ್ವೇಳಿ. ಆದ್ರೆ ಅವ್ನಿಗೆ ಗೊತ್ತುಂಟು. . . .

ಪಟ್ಟಾಭಿ – ಅಜ್ಜ ಇನ್ನೊಂದು ಯಾವಾಗ್ಲೂ ಹೇಳ್ತಿರ್ರಾರೆ. ಈಗ ಹೇಳಿದ್ದೇ.

ನಿನ್ಗೆ ಬೇಕಾದ್ದನ್ನ ಹೆಕ್ಕಿ ತೆಗೀಂತ. ಆ ಹೆಕ್ಕಿ ತೆಗೀಬೇಕಾದ್ರೆ ಪ್ರಾಮಾಣಿಕತೆ ಇರ್ಬೇಕು. ಇದ್ದಾಗ ಮಾತ್ರ ಹೆಕ್ಕಿ ತೆಗೀಲಿಕ್ಕೆ ಸಾಧ್ಯ. ಹಾಗಾಗಿ ಇಂತಹ ಸತ್ಸಂಗಗಳಲ್ಲಿ ಮಾಡ್ಬೇಕಾಗಿರೋದು ಒಂದು ನಿಜಕ್ಕೂ ನಾನು ಇರುವಿಕೆಯ ಸ್ಥಿತಿಯಲ್ಲಿ ನಾನು ಕೂತಾಗ ಮಾತ್ರ ಆ ಸಂಗ ಏರ್ಪಡುತ್ತೆ. ಆ ಸಂಗ ಏರ್ಪಟ್ಟಾಗ ಆ ಕಮ್ಯೂನಿಕೇಶನ್ ಡೆವಲಪ್ ಆಗುತ್ತೆ. ಡೆವಲಪ್ ಆಗಿ ಎಲ್ಲವೂ ನಂಗೆ ಸಿಕ್ತಾ ಹೋಗತ್ತೆ. . . . (D.R.)

ಅದಕ್ಕೋಸ್ಕರ ಎಲ್ಲಾ ಮಾತುಗಳು ಒಗಟು ಅಂತ ನಮಗನ್ನಿಸಿದರೂ ಕೂಡ ತುಂಬ ಸರಳ ಅಂತ ನಮಗನ್ನಿಸಿದರೂ ಸಹ ಮೂಲಭೂತವಾಗಿ ಇರೋದಿಷ್ಟೆ. ನಾನು ನನ್ನ ಇರುವಿಕೆಯಲ್ಲಿ ನಿಲ್ಲೋದನ್ನ ಕಲೀಬೇಕೂಂತ ಅಷ್ಟೆ.

ಅಜ್ಜ – ಹೌದು. ಸತ್ಸಂಗ ಅಂದ್ರೆ . . .

ಸತ್ = ಇರುವಂಥದ್ದು. ಯಾವುದು ಅಂದರೆ ಸಂಗ ಮಾಡಿದರೆ ನೋಡಿ ಆ ಇರುವಿಕೆಯು. ಆ ಸತ್ ಸಂಗ ಮಾಡಿದವನಿಗೆ ಬರ್ತದೆ. ಸತ್ ಅಂದ್ರೆ ಇರೋದು . . . ಅರ್ಥ ಮಾಡ್ಲಿಕ್ಕೆ ದಿನಗಟ್ಲೆ ಬೇಕಾಗ್ತದೆ ಯಾವುದು ಸರೀ ವಿವರ ಕೊಡ್ಲಿಕ್ಕೆ.

ಪಟ್ಟಾಭಿ – ನಮ್ಗೆ ಈಗ ಏನಾಗಿದೆ ಅಂದ್ರೆ ಸತ್ಸಂಗ ಹೋಗಿ ಸತ್ತ ಸಂಗ ಆಗಿದೆ.

ಅಜ್ಜ – ಆ ಇರುವಂಥದ್ದರ ಸಂಗ ಮಾಡಿ. ಆ ಇರುವಂಥದ್ದು ಯಾವುದು? ಆ್ಞಂ . . . . (D.R.)

ಅಜ್ಜ – . . . . ಆ ಸಂಗಕ್ಕೆ ದೋಷ ಉಂಟೂಂತ ಬರ್ತದೆ. ಆ ಸಂಗಕ್ಕೊಂದು ರಿಮಾರ್ಕ್ ಬರ್ತದೆ. ಅದು ಬರ್ಲಿಕ್ಕೆ ನಾವು ಬಿಡಬಾರದು. ನಾವು ಅದಕ್ಕೆ . . . ನಾವೇ ಅದಕ್ಕೆ ರಿಮಾರ್ಕ್ ತಂದುಕೊಂಡರೆ ಇನ್ನು ಜನ ಏನು ಹೇಳ್ಯಾರು. ಆ ಸಂಗವನ್ನು ಬೆಳೆಸ್ಲಿಕ್ಕೆ ಪ್ರಯತ್ನ ಮಾಡಬೇಕು ಪ್ರತಿಯೊಬ್ಬರೂ. ಹಾಗಾಗಿ ನಾವು ಅಂಥದಕ್ಕೆ ಹೋಗ್ಬಾರ್ದು.

ಪಟ್ಟಾಭಿ – So, ನಾವು ಇಂಥಾ ಸತ್ಸಂಗವನ್ನು ಹೆಚ್ಚೆಚ್ಚು ಬೆಳೆಸ್ತಾ ಹೋಗೋಣ. ಮತ್ತೆ ಇಂಥಾ ಸತ್ಸಂಗವನ್ನು ಏರ್ಪಡಿಸಲಿಕ್ಕೆ ಅವಕಾಶ ನಿರ್ಮಾಣ ಮಾಡೋಣ. ನನಗನಿಸತ್ತೆ . . . ನಮಗೆ ೨ ಕರ್ತವ್ಯ ಇದೆ.

ಒಂದು ನನ್ನೊಳಗೆ ಸತ್ಸಂಗವನ್ನು ಬೆಳೆಸುತ್ತಾ ಹೋಗುವಂಥದ್ದು. ಇದು ಪ್ರಮುಖವಾದ ಕರ್ತವ್ಯ.

ನಮ್ಮ ಪರಿಸರದಲ್ಲಿ ಸತ್ಸಂಗವನ್ನು ಏರ್ಪಡಿಸಲಿಕ್ಕೆ ವಾತಾವರಣ ನಿರ್ಮಾಣ ಮಾಡುತ್ತಾ ಹೋಗೋಣ. ಇದು ಎರಡೂ ಸಹ ಜೊತೆ ಜೊತೆಯಾಗಿ ಆಗ್ಬೇಕು. ಕೇವಲ ನನ್ನೊಳಗೆ . . . (D.R.) . . . ನಮ್ಮೊಳಗೆ ಆ ಕರ್ತವ್ಯದ ಕಳಕಳಿ ಜಾಗ್ರತ ಆಗ್ಬೇಕು. ಅರಿವು ಜಾಗೃತಿ ಆಗ್ಬೇಕು. ಆ ರೀತಿ ಆದಾಗ . . . (D.R.)
ಬೆಳೀಬೇಕು. ಜಾಗದಲ್ಲೂ ವ್ಯವಸ್ಥೆ ಆಗ್ಬೇಕು. ಜಾಗದಲ್ಲಿ ವ್ಯವಸ್ಥೆ ಆಯ್ತೂಂದ್ರೆ . . .

[ಕ್ಯಾಸೆಟ್ಟಿನ A ಭಾಗದಲ್ಲಿ ಉಳಿದದ್ದೆಲ್ಲಾ ಪಟ್ಟಾಭಿಯವರ ಯೋಗಸೂತ್ರಗಳ ಮೇಲಿನ ಉಪನ್ಯಾಸದಿಂದ ತುಂಬಿದೆ. ಅದನ್ನು ಬರೆದಿಲ್ಲ.]

ಅಜ್ಜ – ಯಾವುದ್ರ ವಿಚಾರ. ಆನಂದಮಯ ಜೀವನ ನಡೀತಾ ಇದೆ. ಸ್ವಲ್ಪ ಮಾತಾಡ್ತಿರು. ಆನಂದಮಯ ವಿಚಾರದ ಬಗ್ಗೆ ಎರಡು ಮಾತು . . . ನಮಗೆಲ್ಲರಿಗೂ ಆನಂದ ಉಂಟಾಗಲಿ . . . . ಉಂಟಾಗ್ಲಿಕ್ಕೇನಿಲ್ಲ. ಆನಂದಮಯ ಜೀವನವೇ ನಮ್ದು ಮಾತ್ರವಲ್ಲ, ಆನಂದ ಸ್ವರೂಪಿಗಳೇ ನಾವು. ನಮ್ಗೆ ಗೊತ್ತಿಲ್ಲ. ಗೊತ್ತಿಲ್ಲದೇ ಇರ್ಲಿ. ನಾವು ಆನಂದ ಇದ್ರ ಮೇಲೆ ಏನು ಮಾತು ಬೇಕು. ಎಲ್ಲಾ ಆನಂದದಲ್ಲಿ ಅಡಗಿ ಹೋಯ್ತಪ್ಪಾ . . . ನಾವು ಕಳ್ದ ವರ್ಷ ಬರುವಾಗ ಇದು ಹೇಗಿತ್ತು. ಆನಂದವು ಅಡಿಪಾಯ ತೆಗೀ . . . ಅದು ಸ್ವಲ್ಪ ಮೇಲೆ ಉಕ್ಕಿ ಬಂತು.

ಅದು ಉಕ್ಕಿ ಬರ್ತಾ ಬರ್ತಾ ಏನಗ್ತದೆ. ಸ್ಫೋಟ ಆಗಿಬಿಡ್ತದೆ. ಜೀವನವು ಸಾರ್ಥಕವಾಯಿತು. ಹ್ಞಾಂ. ನಮ್ಗೆ ಬೇಕಾದ್ದು ಅದೇ. ಅದ್ಕೊಂದು ಮಾಧ್ಯಮ ಇದು. ಯಾವುದು – ಈ ಸಾಧನ ಸಂಗಮ ಎಂಬುದು. ಇದರಿಂದ ಮುಂದೆ ಹೋಗ್ತದೇಂತ ಹೇಳುದು. ಹೋಗ್ತಾ ಉಂಟು ಅದು. ನಾವು ನೋಡ್ತಾ ಇದ್ದೇನೆ.

ಹ್ಞಾಂ. ಇನ್ನೇನು. ಆನಂದದ ಮೇಲೆ ಇನ್ನೇನುಂಟು ಹೇಳಿ. ಫೌಂಡೇಶನ್ ಆನಂದ. ಅದರ ಮೇಲೆ ಕಟ್ಟಿದ್ದು ಯಾವುದೂ ನಿಲ್ಲೋದಿಲ್ಲ. ಆನಂದವೇ ಉಕ್ಕಿ ಬರ್ತದೆ. ಪ್ರವಚನ ಯಾಕಾಗಿ?

ನಮ್ಮ ಕೃತಿಗಾಗಿ.

ಕೃತಿ ಯಾಕಾಗಿ. ಹ್ಞಾಂ.

ಆ್ಞಂ . . . .

ಜ್ಯೋತಿ ಬೆಳಗಿಸ್ತಾ ಆಯ್ತು. ಬೆಳಗ್ತಾ ಇದ್ದಾರೆ.

ನಾವು ನೋಡಿಯಾಯ್ತು. ವೀಕ್ಷಕರಾಗಿ.

ಯಾರಾದ್ರೂ ಮಾತನಾಡಿ . . .

ನಾವು ಬಿದ್ದಾಯ್ತೀ. . . ನಮ್ಮನ್ನು ಬೀಳಿಸಿಬಿಟ್ಟಿದ್ದೀರಿ ಆನಂದದಲ್ಲಿ. ಇದರ ಮೇಲೆ ಮಾತೆಂತಪ್ಪಾ . . . ಹ್ಞ್ಞಾ. (ನಗು)

ಪುರಂದರ ದಾಸರು ಹೇಳಿದ್ದಾರಂತೆ ನಗೆಯು ಉಕ್ಕಿ ಬರುತಿದೆ . . . ಎಲ್ಲಿಂದ ಬರುತಿದೆ . . . ಉಕ್ಕಿ ಬರುವುದು ಎಲ್ಲಿಂದ . . ಉಕ್ಕಿ ಬರುವುದು ಎಲ್ಲಿಂದ . . . ನಗೆ ಬರುತ್ತಾ ಇದೆ, ನಗೆ ಯಾಕಾಗಿ. ನಿಮ್ಮೆಲ್ಲರನ್ನೂ ನೋಡಿ, ನಾವೂ ಕೂಡಿ, ನೀವೆಲ್ಲರೂ ಅಂದ್ರೆ

ನಮಗೆ ಏನು ಬೇಕು.

ಎಲ್ಲವೂ ತಯಾರಾಗಿ ಉಂಟು. ನಾವು ನೋಡಿ ಅಂತ ಹೇಳ್ತದೆ.

ಆ ದೃಷ್ಟಿಯನ್ನು ಬೆಳೆಸಿಕೊಂಡ ಮೇಲೆ. ಛೆ!

ಇದಕ್ಕೆ ಸಾಧನೆಯೂ ಬೇಕು. ಶೋಧನೆಯೂ ಬೇಕು.

ಸಾಧನೆ ಫೌಂಡೇಶನ್ ಅಂತ ಇಟ್ಟುಕೊಳ್ಳುವ.

ಆಮೇಲೆ ಶೋಧನೆ ಮಾಡುವ.

ಅದುವೇ ಸಂಗಮ.

ಸಾಧನೆ – ಶೋಧನೆಯ ಸಂಗಮದಿಂದ ಜೀವನ ಸಾರ್ಥಕವಾಯಿತು.

ನಾವು ಯಾಕೆ ಜನ್ಮಕ್ಕೆ ಬಂದಿದ್ದೇವೆ.

ನಮ್ಮನ್ನು ನಾವು ಪರಿಚಯ ಮಾಡಿಕೊಳ್ಳುವುದಕ್ಕಾಗಿ.

ನಾವು ದೇಹಸ್ವರೂಪಿಗಳೂಂತ್ಹೇಳಿ ಸ್ವಲ್ಪ ಕತ್ತಲೆಯಲ್ಲಿ ಬಿದ್ದಿದ್ದೇವೆ. ಆ ಕತ್ತಲೆಯಲ್ಲಿ ಬೆಳಕನ್ನು ಕಾಣುವುದಕ್ಕಾಗಿ ಜನ್ಮದ ಉದ್ದೇಶ.

ಆ ಕತ್ತಲೆಯು ಬೆಳಕಾಗಿ ಸಂಭವಿಸುವಂಥದ್ದು.

ತಮಸೋಮಾ ಜ್ಯೋತಿರ್ಗಮಯ. ಎಲ್ಲಿಗೆ ಹೋಗುವುದು ಬೆಳಕನ್ನು ನೋಡ್ಲಿಕ್ಕೆ.

ಯಾರು ಕರಕೊಂಡು ಹೋಗುವುದು . . . ?

ನಾವು ಬೆಳಕೇ ಆಗಿದ್ದೇವೆ.

ನಾವು ಬೆಳಕಿನಿಂದ ಬಂದವರು. ಆದ್ದರಿಂದ ಬೆಳಕಿನ ಕಡೆಗೆ ಕೊಂಡುಹೋಗು. ಪ್ರಾರ್ಥನೆ ಮಾಡ್ಲಿಕ್ಕೆ ಸಾಧ್ಯ ಆಯ್ತು. ಅವ ಇಲ್ಲಿ ಬಂದು ಏನು ಗ್ರಹಿಸಿದ . . . ಅದು ನೆನಪಾಯ್ತು. ಆಯ್ತು.

ತನ್ನಿಂದ ತಾನೇ ಆಗ್ತದೆ.

ಅದೆಕ್ಕೆ ಸ್ವಲ್ಪ ಸಾಧನೆ . . . ಆಮೇಲಪ್ಪಾ ನೋಡು . . .

ನಮ್ಮನ್ನು ಇಲ್ಲಿಗೆ ಬರ್ಲಿಕ್ಕೆ ಮಾಡಿದ್ದೀರಿ.

ನಾವಿಲ್ಲಿಗೆ ಬಂದಿದ್ದೇವಾ ಇಲ್ವಾ ಗೊತ್ತು ನಿಮ್ಗೇನೇ . . . (ನಗು)

ನಮಗೇನು ಗೊತ್ತಿದೆ ಅಥವಾ ಗೊತ್ತಿರೋದಾದ್ರೂ ಯಾರು?

ನಾವು ಯಾರು.

ನಾವು ಯಾವುದೂ ಅಲ್ಲ. ಯಾವುದೋ ಒಂದು ಅವ್ಯಕ್ತ ಶಕ್ತಿಯು ಇದ್ದುಕೊಂಡು ಅದು ಇಂದ್ರಿಯಗಳ ಮೂಲಕ ಶಬ್ದಗಳನ್ನು ಹೊರ ಹಾಕ್ತಾ ಉಂಟು.

ಆ ಮಾತುಗಳನ್ನು ಬರ್ಕೋದು – ಯಾರು ಕೇಳ್ತಾರೋ ಅವರು. ಅವರು ಬರಿಸೋದು ಅಷ್ಟೇ! ನಮ್ಮ ಕೈಯಲ್ಲಿ ಏನೂ ಇಲ್ಲಪ್ಪ . . .

ಅವರು ಮಾತಾಡ್ತಾರಾ . . .  ಮಾತ್ನಾಡಿ . . .

. . . . . . . . . . . . . . . . . (D.R.)

ಆನಂದವನ್ನು ಅನುಭವಿಸಿ ಆನಂದವೇ ಆದಾಗ ಮಾತುಗಳು ನಿಂತು ಹೋಗ್ತಾವೆ . . .

ಯಾರು ಜನ್ಮಕ್ಕೆ ಬಂದದ್ದು. ನಾವು.

ನಾವು ಯಾರು? ಇದೇ ಪ್ರಶ್ನೆ ಯಾರು?

ಈ ಪ್ರಶ್ನೆಗೆ ಉತ್ತರವನ್ನು ಅವನವನೇ ಕಂಡಾಗ ಪ್ರಶ್ನೆನೂ ಇಲ್ಲ, ಉತ್ತರನೂ ಇಲ್ಲ. ಇದು ಆನಂದ. ಯಾವುದೂ ಇಲ್ಲ.

ಅಲ್ಲಿಂದ ಎಲ್ಲವೂ ಉಂಟಾಗುತ್ತದೆ.

ಉಂಟಾದದ್ದು ಇರ್ತದೆ. ಇಲ್ಲದೇ ಆಗುತ್ತದೆ.

ಸೃಷ್ಟಿಯಾದದ್ದಕ್ಕೆ ನಾಶ ಉಂಟು. ಅದಕ್ಕೆ ನಾಶವಿಲ್ಲ.

ಆ ನಾಶವಿಲ್ಲದೇ ಇರುವಂಥ ಸ್ಥಿತಿಯೇ ನಮ್ಮ ಜೀವನ.

ಯಾವುದು . . .  ಪ್ರತಿಯೊಂದು ಜೀವಕೋಟಿಯ ಜೀವನವೂ ಅದೇ.

ಅದ್ಕೆ ಹೋಗ್ಲಿಕ್ಕೆ ಬೇಕಾದಾಗ ಏನೋ ಎಲ್ಲ ಗಲಾಟೆ ಗೊಂದಲಮಯ.

ಗೊಂದಲಕ್ಕೆ ನಾವು ಯಾವಾಗ ಪ್ರಾಧಾನ್ಯತೆಯನ್ನು ಕೊಡ್ತೇವೋ, ಗೊಂದಲದಿಂದ ಆಚೆ ಹೋಗ್ಲಿಕ್ಕೆ ಸಾಧ್ಯ ಉಂಟು. ಆದ್ದರಿಂದ ಗೊಂದಲ ಬಂದಾಗ, ದುಃಖ ಬಂದಾಗ ಏನೊಂದೂ ಬೇಸರ ಮಾಡದೆ ಅದಕ್ಕಾಗಿ ಪರಮಾತ್ಮನಲ್ಲಿ ಪ್ರಾರ್ಥನೆ ಕೂಡಾ ಮಾಡದೇ ಸ್ವೀಕಾರ ಮಾಡೀಂತ ಹೇಳ್ತದೆ. ಅದರಲ್ಲಿ ಎಲ್ಲವೂ ಬಂತು.

ಬಂಧನ ಬಂತು. ಬಿಡುಗಡೆಗಾಗಿ ಪ್ರಯತ್ನ ಅಲ್ಲ.

ಸ್ವೀಕಾರ ಮಾಡುವ.

ಒಳಗಡೆ ಅದು ಬೆಳವಣಿಗೆ ಬಂದಾಗ ಸ್ಫೋಟವಾಯಿತು. ಬಿಡುಗಡೆಯಾಯಿತು. ಅದು ತನ್ನಿಂದ ತಾನೇ ಆಗ್ಬೇಕು. ನಾವಾಗಿ ಬಿಡುಗಡೆ ಪ್ರಯತ್ನ ಮಾಡಿದರೆ ಪುನಃ ಬರ್ತದೆ. ಆ ಸ್ವೀಕಾರದಲ್ಲಿ ಬಿಡುಗಡೆ. ಅಲ್ಲ.

ಹೆಚ್ಚು ಕಮ್ಮಿಯಾದರೆ . . .  ಹೇಳಿಬಿಡಿಯಪ್ಪಾ.

ಯಾಕೇಂದ್ರೆ ನಮ್ಮಲ್ಲಿ ಕಲ್ತ ವಿಚಾರ ಏನಿಲ್ಲ. ಓದಿದ ವಿಚಾರ ಏನಿಲ್ಲ. ಯಾರೋ ಎಲ್ಲಿಯೋ ಯಾರೋ ಏನೋ ಮಾತಾಡ್ತಾ ಇದ್ದಾರೆ. ಅದು ರೇಡಿಯೋ ಮೂಲಕ ಬರ್ತದೆ.

ರೇಡಿಯೋಕ್ಕಾದ್ರೆ ಎಷ್ಟು ಬೆಲೆ ಉಂಟು. ತುಂಬಾ ಉಂಟಲ್ಲ.

ಈ ದೇಹಕ್ಕೆ ಬೆಲೆ ಉಂಟಾ? ಐದು ನಯಾ ಪೈಸೆಗೆ ಈ ದೇಹ ಬೇಕಾ? ಬೇಡ. ಈ ದೇಹ ಜಡ ಆದಾಗ ಇದಕ್ಕೇ ೧೦ ರೂಪಾಯಿ ಖರ್ಚು ಮಾಡ್ಬೇಕಾಗ್ತದೆ. ಅಲ್ಲ.

ಹಾಗಾದ್ರೆ ಇದರಲ್ಲಿ ಬರುವ ಮಾತುಗಳು ಎಲ್ಲಿಂದ ಬಂತು?

ಅದು ಎಲ್ಲರಲ್ಲೂ ಉಂಟು.

ಹಾಗಾದ್ರೆ ಎಲ್ಲರ ಸಮೂಹದಿಂದ ಇಲ್ಲಿ ವ್ಯರ್ಥ ಏನೋ ಮಾತು ಬಂತು. ಎಲ್ರ ಮಾತೇನೇ ಇದು. ಅಂಥಾ ಒಂದು ಸತ್ಸಂಗ ಅಲ್ಲ ಇದು. ಎಲ್ಲಾ ಕಡೆಯಲ್ಲಿ ಆಗ್ತಾ ಉಂಟು. ಅದರೊಟ್ಟಿಗೆ ಜಗತ್ತಿಗೆ ಏನು ಶಾಂತಿ ಉಂಟಾಗ್ಲಿ.

ಇಲ್ಲಿ ಇದು ಪ್ರಾರಂಭ ಆಯ್ತಪ್ಪ. ಒಂದು ವರ್ಷದಿಂದ ಇನ್ನು ಮುಂದೆ ಮುಂದೆ ಬೆಳವಣಿಗೆ ಆಗ್ತಾ ನಮ್ಗೆಲ್ಲರಿಗೂ ಆನಂದವನ್ನು ಆ ಪರಮಾತ್ಮನು ಕರುಣಿಸ್ಲಿ ಅಂತ್ಹೇಳಿ . . . ಯಾರಪ್ಪಾ ಹೇಳೋದು ಇದು. ಪಟ್ಟಾಭಿರಾಮನ್ ಹೇಳ್ತಾರೆ . . . ಅವರ . . . ನಾವು ಹೇಳಿಯಾಯ್ತು . . . ಶ್ರೀ ರಾಮ್

ಪಟ್ಟಾಭಿ – ಅಜ್ಜನ್ಗೆ ಮಾತಾಡಿಸ್ಬೇಕಾದ್ರೆ ನಾವು ಪ್ರಶ್ನೆಗಳನ್ನು ಹಾಕುತ್ತಾ ಹೋಗಬೇಕು.

ಅಜ್ಜ – ಏನು ಪ್ರಶ್ನೆಗಳು . . . ಎಲ್ಲಿ ಪ್ರಶ್ನೆ ಉಂಟೋ ಅಲ್ಲಿಯೇ ಉತ್ತರ ಉಂಟುಪ್ಪಾ . . . ಮುಗೀತು. ಎಲ್ಲಿ ಪ್ರಶ್ನೆಯು ಉದ್ಭವವಾಯಿತೋ ಆ ಮೂಲದಲ್ಲೇ ಉತ್ತರ ಉಂಟು. ಆ ಉತ್ತರ ಇದ್ದಕಾರಣ ಪ್ರಶ್ನೆ ಉತ್ಪತ್ತಿಯಾಗ್ಲಿಕ್ಕೆ ಸಾಧ್ಯತೆ ಆಯ್ತು. ಇಲ್ಲವಾದರೆ ಸಾಧ್ಯತೆ ಇಲ್ಲ. ಯಾಕಂದ್ರೆ ಅವ ಪ್ರಶ್ನೆಗೆ ಉತ್ತರವನ್ನು ಕಂಡುಕೊಂಡಿದ್ದಾನೆ. ಆದ್ರೆ ಅವ ಪ್ರಶ್ನೆ ಹಾಕ್ತಾನೆ . . . ಹೊರಗಿಂದ ಬರ್ಲಿಂತ.

ಇದು ಏನೂಂತ ಕೇಳ್ತಾನೆ ಅವನು. ತನ್ನ ಇದುವನ್ನು ಕಂಡಿದ್ದಾನೆ.

ಇದು ಏನು? ಇಲ್ಲವಾದ್ರೆ.

ಹಾಗಾಗಿ ಎಲ್ಲಿ ಪ್ರಶ್ನೆ ಉಂಟೋ ಅಲ್ಲೇ ಉತ್ತರ ಸಿಕ್ಕಿದ್ರೆ ಭದ್ರತೆ ಆಯ್ತಪ್ಪಾ . . . ಒಬ್ಬ ಉತ್ತರ ಕೇಳಿದ್ರೆ ಏನಾಯ್ತಪ್ಪಾ. ಅದು ಅವನ ಒಳಗಿಂದ ಬರ್ಬೇಕಲ್ಲಾ. ಹಾಗಾಗಿ ಆ ಉತ್ತರ ಕಂಡುಕೊಳ್ಳುವ ವಿಧಾನವನ್ನು ಅವ್ಯಕ್ತದಿಂದ, . . . . ವ್ಯಕ್ತದಿಂದ ಆಗುವುದಿಲ್ಲ. ಆಗ್ತದೆ. ಅವ ಏನೋ ಉತ್ತರ ಹೇಳಿದ. ನಾವು ಕೇಳಿಯಾಯ್ತು. ಏನೋ ಏನೋ ಆಯ್ತು. ಅವನಲ್ಲಿ ಆ ಸ್ಫೂರ್ತಿ ಬರ್ಲಿ. ಒಳಗಿಂದ ಅದು ಸ್ಫೋಟ ಆಗ್ಲಿ. ಅದು ಉಂಟು. ಅದಕ್ಕೆ ಕ್ರಮ ವಿಧಾನಗಳು ಅದು ಈವಾಗ ಬೇಡ.

ಎಲ್ಲಕ್ಕೂ ನಮ್ಮ ಮನಸ್ಸೇ ಕಾರಣ. ಏನಪ್ಪಾ ಮನಸ್ಸಂದ್ರೆ. ಮನಸ್ಸು ಉಂಟಾ?

ಪಟ್ಟಾಭಿ – ಭಾವನೆಗಳೇ ಮನಸ್ಸು.

ಅಜ್ಜ – ಭಾವನೆಗಳ ಒಂದು ಸಮೂಹವೇ ಮನಸ್ಸು. ಭಾವನೆಗಳು ನಿಂತಾಗ ಮನಸ್ಸಲ್ಲಿ ಇಲ್ಲವಾಗ್ತದೆ. ಆಚೆಗೆ ನಮ್ಮ ಜೀವನ ಉಂಟು. ಮನಸ್ಸಿನ ಆಚೆಗೆ ನಮ್ಮ ನಿಜವಾದ ಜೀವನ ಉಂಟು. ಅಂದರೆ ಸಾವಿನಾಚೆಗೆ ಬದುಕು. ಅಂದರೆ ಇದು ಬದುಕಲ್ವಾ. ಆ್ಞ. . . ಇದು ಬದುಕಲ್ವಾ . . . ಅಲ್ಲಿ ಉಂಟು ಅಂದ್ರೆ ಇದು ಬದುಕಲ್ಲಾಂತ ಆಯ್ತಪ್ಪ. ಅಂದ್ರೆ ನಿಜವಾದ ಬದುಕು ಎಂಬುದು ಸಿಕ್ಕಿದ್ರೆ ಅಲ್ಲಿ ಸಾವು ಎಂಬುದಿಲ್ಲ. ಅದು ಬದುಕು. ಸಾವು . . . ಹುಟ್ಟು ಸಾವು ಎಲ್ಲಾ ಉಂಟು. ಆದ್ರಿಂದ ಇದು ಬದುಕಲ್ಲಾಂತ ಹೇಳ್ಳಿಕ್ಕೆ ನಮಗೆ ಧೈರ್ಯ ಉಂಟು. ಅಲ್ಲಿ ಬದುಕು ಮಾತ್ರ. ಸಾವಿಲ್ಲ. ಇದು ಪುನರ್ಜನ್ಮ ಸಿದ್ಧಾಂತದಲ್ಲಿ ಬರ್ತದೆ. ಪುನರ್ಜನ್ಮ . . ಹಾಗೆ ಪುನರ್ಜನ್ಮವಿಲ್ಲದ ಸ್ಥಿತಿ. ಸಾವಿನಾಚೆಗಿನ ಬದುಕಿನ ಕಡೆಗೆ ನಾವು ಹೋದಾಗ ಪುನರ್ಜನ್ಮವಿಲ್ಲ. ನಮಗೆ ಒಂದೇ ಜನ್ಮ. ದೇಹಕ್ಕೆ ಅನೇಕ ದೇಹಗಳಾಯ್ತು. ಇದನ್ನೇ ನಾವು ಜನ್ಮ ಜನ್ಮ ಅಂತ ತಿಳ್ಕೊಂಡಿದ್ದೇವೆ. ಜನ್ಮ ಒಂದೇ ಮೂಲ ಪ್ರಕೃತಿ ಉಂಟಾಯಿತು. ಇರುತ್ತದೆ. ಸೃಷ್ಟಿ ಇಲ್ಲದೆ ಆಯ್ತಾ. ಸೃಷ್ಟಿಗೆ ಮೊದಲು ಯಾವುದಿತ್ತು. ಅದುವೇ ನಮ್ಮ ಸಿದ್ಧಾಂತ. ಸೃಷ್ಟಿಗಿಂತ ಮೊದಲೇ ನಾವು ಇದ್ದವರು. ಇಲ್ಲದಿದ್ದರೆ ಆನಂದ ಎಂಬ ಶಬ್ದವೇ ಬರ್ಲಿಕ್ಕಿಲ್ಲ.. ಆನಂದದಿಂದ ನಾವು ಉದ್ಭವ ಆಯಿತು. ಉಂಟಾದವರು. ಈ ಉಂಟಾದದ್ದು

ಇರುತ್ತದೆ. ಇಲ್ಲದೇ ಆಗುತ್ತದೆ. ನಮ್ಮ ಮೂಲಕ್ಕೆ ನಾವು ಹೋದಾಗ ಆನಂದವೇ ನೋಡಿ. ಇದೆಲ್ಲಾ ತತ್ವ ಸಿದ್ಧಾಂತಗಳು.

ಈ ಪ್ರಪಂಚ . . . ಇದೇನು? ಆ ಮನಸ್ಸು ಆ ವಿಚಾರಕ್ಕೆ ಹೋದ್ರೆ ಅವ ಶೋಧನೆಗೆ ಇಳೀತಾನೆ. ಆ ಮನಸ್ಸು ಶೋಧನೆಗೆ ಇಳೀಬೇಕಾದ್ರೆ ಸಾಧನಾ ಪ್ರಪಂಚದಲ್ಲಿ ಮುದುವರಿದಾಗ ಶೋಧನಾ ಪ್ರಪಂಚಕ್ಕೆ ಹೋಗ್ತಾನೆ. ಫೌಂಡೇಶನ್. . .

ಯಾರಾದ್ರೂ ಮಾತ್ನಾಡುವವರಿದ್ರೆ ಮಾತ್ನಾಡಿ . . .

ನಿಮ್ಮ ನಿಮ್ಮೊಳಗೇ ಮಾತ್ನಾಡಿ. . . . ಅದು ಹೊರಗೆ ಕೇಳ್ತದೆ ಆಮೇಲೆ.

ನಿಮ್ಮ ನಿಮ್ಮೊಳಗೇ ಮಥನ ಮಾಡಿ. ಅದು ಹೊರಗೆ ಕೇಳ್ತದೆ ಆಮೇಲೆ ಎಲ್ಲರಿಗೂ.

ಹಾಗೆ ಬೆಂಗಳೂರಿಗೆ ಬಂದವರು . . . ಅಲ್ಲ ನಾವು ಬೆಂಗ್ಳೂರಿನವರೇ. ಸ್ವಲ್ಪ ದೂರ ಹೆಚ್ಚು ಕಮ್ಮಿ . . . . . (D.R.)

ಹಾಗಾದ್ರೆ ನಾವು ಬಂದವರು.

ಎಲ್ಲಿಂದ? ಒಂದು ವೇಳೆ ಬಂದವರೂಂತ ಆದ್ರೆ ಎಲ್ಲಿಂದ? ಆ ಪ್ಲೇಸ್ ಸ್ಥಳ ಯಾವುದದು. ನಮ್ಮ ಜನ್ಮ ಇದಲ್ಲ. ಅಲ್ಲವೇ ಅಲ್ಲ. ಪುನರ್ಜನ್ಮ ಸಿದ್ಧಾಂತ ಪ್ರಕಾರ ಎಷ್ಟು ಜನ್ಮಗಳು. ಜನ್ಮಕ್ಕೆ ಮೊದಲೇ ನಾವುಂಟು. ಜನ್ಮಕ್ಕೆ ಲೆಕ್ಕ ಉಂಟಾ? ಮೊದಲೇ ಇದ್ದವರು.

ನಾವು ಅಂದ್ರೆ ಎಲ್ಲರೂ ಬಂತು. ಇಡೀ ಜೀವ ಜಂತುಗಳೇ ಬಂತು.

ಒಬ್ಬಿಗೇ ಸೀಮಿತವಲ್ಲ ಇದು.

ಹಾಗೆಲ್ಲಾ ಬರ್ತದೆ . . .

ಇರ್ತದೆ. ಇಲ್ಲದಾಗ್ತದೆ . . . . (D.R.)

ಹಾಗಾದ್ರೆ ವರ್ತಮಾನ ಕಾಲಾಂತ ಹೇಳ್ತದೆ.

ಸೃಷ್ಟಿಯಾದದ್ದು ಯಾವಾಗ. ಈವಾಗ . . .

ವರ್ತಮಾನ ಕಾಲ ನೋಡಿ ಈ ಭೂಮಿ ತಿರುಗ್ತಾ ಉಂಟು. ಕಾಲ . . .

ತಿರುಗದೇ ಇದ್ರೆ . . . ಕಾಲ ಏನಾಯ್ತು

ಈ ಮನಸ್ಸು ಗೊಂದಲ, ಚಂಚಲಮಯ. ಇರುವಲ್ಲಿವರೆಗೆ ಏನು . . . ಕಾಲ ಇರುತ್ತೆ. ನಾವು ಕಾಲಾತೀತರು.

ದೊಡ್ಡ ಸಿದ್ಧಾಂತ ಇದು. ಇದು ಆಡಂಬರದ ಮಾತಲ್ಲ. ದೊಡ್ಡ ಒಂದು ಇದಲ್ಲ. ಆದ್ರಿಂದ ಆನಂದಮಯ ಜೀವನಕ್ಕಾಗಿ ನಾವು ಹುಡುಕ್ಬೇಕು. ಅದು ಇದು ಯಾವುದೂ ಇಲ್ಲ.

ನಾವು ಆದುವೇ ಇದ್ದೇವೆ ಎಂಬ ವಿಶ್ವಾಸ ಧೈರ್ಯ ಬಂದು ಬಿಟ್ರೆ ಅದುವೇ ನಮ್ಮನ್ನು ಮುಂದೆ ಕೊಂಡು ಹೋಗ್ತದೆ.

. . . (D.R.)

ನಮಗೆ ನಿಜವಾಗಿ ನಂಬಿಕೆ ವಿಶ್ವಾಸ ಇದ್ರೆ ಕತ್ತಲು ಬೆಳಕಾಗಿ ಸಂಭವಿಸುತ್ತದೆ. ಇದು ಉಪನಿಷತ್ತು . . . ಕತ್ತಲೆಯಿಂದ ಬೆಳಕಿನ ಕಡೆಗೆ ಕೊಂಡು ಹೋಗೂಂತ ಹೇಳ್ತಾನೆ ಅವ. . . ಬಂದಿದ್ದಾನೆ. ಮುಂದೆ ಹೋಗ್ಲಿಕ್ಕೆ ಅವನಿಗೆ ದಾರಿ ಕಾಣೋದಿಲ್ಲ. ಅದಕ್ಕಾಗಿ ಅವನ ಪ್ರಾರ್ಥನೆ. ನನ್ನನ್ನು ಕೊಂಡುಹೋಗೂಂತ್ಹೇಳಿ.

ಆದ್ರೆ ನಿಜವಾಗಿ ಅವನು ಗುರಿಯಲ್ಲಿದ್ದಾನೆ. ಗುರಿಯಲ್ಲಿದ್ದುಕೊಂಡು ಅವ ಹೇಳ್ತಾನೆ ಗುರಿ ತಲುಪಬೇಕೂಂತ್ಹೇಳಿ. ಆದ್ರೆ ಗುರಿ ಒಳಗುಂಟು. ಅವನು ಈ ಬಾಹ್ಯ ಮನಸ್ಸನ್ನು ಅಂತರ್ವಿಚಾರಕ್ಕೆ ಕೊಂಡುಹೋಗಿಬಿಟ್ಟರೆ. . . . ಏನಾಯ್ತು . . .

ಅದು ನಮ್ಮ ಗುರಿ. ಅದು ತಟಸ್ಥ. ಅದು ಉಕ್ಕಿ ಹೊರಗೆ ಬಂತು. ಅದು ವಾಪ್ಸು ಹೋಗಿ ಅಲ್ಲೇ ನಿಲ್ತದೆ. ಇದು ಪ್ರಕೃತಿ ನಿಯಮ. ಆದ್ರೆ ನಿಯಮಾಂತ್ಹೇಳಿ ನಾವು ಸುಮ್ನೆ ಕೂತುಕೊಂಡ್ರೆ ಆಗ್ತದಾ. ಅದ್ಕೆ ಸ್ವಲ್ಪ ಸಾಧನೆ ಬೇಕು. ನಮ್ಮ ಸಾಧನೆಯಿಂದ ಯಾವುದೂ ಆಗತ್ತೆ. ಜೊತೆಗೆ ಅಪ್ಪಾ ನೋಡು . . . ಸಾಧನೆ ಮಾಡುವಾಗ ನೀನು ನೋಡ್ತಾ ಇರು ಅದನ್ನು. ಇದು ಶೋಧನೆ. ಹಾಗಾದ್ರೆ ಸಾಧನೆಗೂ ಮಿತಿ ಉಂಟು. ಶೋಧನೆಗೂ ಮಿತಿ ಉಂಟು. ಮಿತಿಯ ಆಚೆಗಿರುವವರು ನಾವು. ಅದ್ರ ಮೇಲೆ ಈಚೆಗೆಲ್ಲಾ ಇದೆಲ್ಲಾ ಕರ್ಮ, ಜ್ಞಾನ. ಕರ್ಮ, ಜ್ಞಾನ ಎರಡೂ ದಾರಿಯಲ್ಲಿ ಸಿಕ್ಕುವಂಥ ಇದು. . . . ಜ್ಞಾನದಿಂದ ಆಚೆಗೆ ಮೋಕ್ಷ. ಅಲ್ಲಿ ಏನುಂಟು. . . . ಏನಿಲ್ಲ. ನಮಗೆ ಅದು ಬೇಕು.

ಅದಕ್ಕಾಗಿ ಇಂತಹ ಸತ್ಸಂಗಗಳ ಬಳಗ ಒಳ್ಳೆಯದು. ಇಂಥಾದ್ದೂ ಆಗ್ತಾ ಇದೆ. ಸತ್ಸಂಗದ ಸ್ಥಾಪಕರು ಒಬ್ರು ಅದನ್ನು ಮಾಡಿಬಿಟ್ರು. ಅದು ನೂರಾರೂ, ಸಾವಿರಾರೂ ಜನರಿಗೆ ಎಲ್ರಿಗೂ ಅನ್ವಯಿಸುತ್ತದೆ. ಆದ್ದರಿಂದ ಇದರ ಮೂಲಕರ್ತರಿಗೆ ನಮ್ಮ ವಂದನೆಗಳು. ನಾವು ಬರ್ಲಿಕ್ಕೂ ಎಡೆಯಾಯ್ತು ಅವರಿಂದಾಗಿ. ಇಲ್ಲವಾದರೆ ನಾವು ಬರ್ತೇವಾ ಇಲ್ಲಿ. . . ನಮ್ಮನ್ನು ಕರೆಸಿಕೊಂಡಿದ್ದಾರೆ. . . ಮಾತನಾಡಿಸಿದ್ದಾರೆ.

ನೀವು ಕೇಳ್ತಾ ಇದ್ದೀರಿ. ಈ ದೇಹ ಒಂದು ನೆಪ ಮಾತ್ರ . . . ಅ್ಞಂ . . .

ಯಾರೂ ಮಾತ್ನಾಡುವುದಿಲ್ಲ . . . ಜಾನಕೀ ರಾಮಾ . . .

ಜಾನಕೀ ರಾಮ – ಬಾಯಿ ಮುಚ್ಚಿದ್ದೀರಿ.

ಅಜ್ಜ – ಬಾಯಿ ಮುಚ್ಚಿದ್ದೇವಾ. ಹೌದಾ. ಅದು ಒಳ್ಳೇದು. ಬಾಯಿ ಮುಚ್ಚಿದ್ರೆ ಒಳ್ಳೇದು ಬರ್ತದೆ ಆಮೇಲೆ. ಬಾಯಿ ಬಿಟ್ರೆ . . . ಮಾತು ಬರೋದಿಲ್ಲ . . . . (ನಗು) ಗೊತ್ತಾಗಿಲ್ವ. ಬಾಯಿ ಬಿಟ್ಟುಕೊಂಡಿರೋದು ಪ್ರಕೃತಿ ನಿಯಮ. ಅದೂನೂ ಪ್ರಕೃತಿ ನಿಯಮ. ಆ ಪ್ರಕೃತಿ ನಿಯಮದಿಂದ ಪ್ರಕೃತಿ ಆಚೆಗೆ ಬರ್ಲಿಕ್ಕೆ, ನೀವು ಎರಡು ಮಾತ್ನಾಡೀಂತ . . .

ಆನಂದಮಯ ಪ್ರಪಂಚ. . .

ಆನಂದರಾವ್ ಇದ್ದಾರೆ, ಮಾತ್ನಾಡುದಾದ್ರೆ ಅವಕಾಶ ಉಂಟಪ್ಪ . . .

[ಜಾನಕೀ ರಾಂ ಸ್ವಲ್ಪ ಮಾತನಾಡಿದರು] ಆಮೇಲೆ

ಅಜ್ಜ – ಭಾಳ ಒಳ್ಳೇ ಮಾತು . . . (D.R.)

ಮೋಕ್ಷ ಆದ್ರೆ ಮುಗೀತಪ್ಪಾ . . ನಮ್ಗೆ ಯಾವ ಅನುಭವವೂ ಇಲ್ಲ. ಸತ್ಸಂಗದಲ್ಲಿ ಎಲ್ಲ ಅನುಭವ ಬರ್ತದೆ. ಮೋಕ್ಷ ಆದ್ರೆ ಮುಗೀತಪ್ಪಾ . . . ಅದು ಬೇಡ ನಮಗೆ. ಬೇಕು ಸತ್ಸಂಗ ಬೇಕು. ಇದರಲ್ಲಿ ನಾವು ಎಲ್ರೂ ಮೋಕ್ಷದ ದಾರಿಗೆ ಹೋಗುವ ಸಂದರ್ಭ ಒದಗ್ತದೆ. ಒಬ್ನಿಗೆ ಮೋಕ್ಷ ಸಿಕ್ಕಿದ್ರೆ ಅದು . . .

ನಾವು ಹೇಳ್ತದೆ. ನಮಗೊಬ್ನಿಗೆ ಮೋಕ್ಷ ಸಿಕ್ಕಿದ್ರೆ. . . . ನಮ್ಗೆ ಬೇಡಪ್ಪಾ. ಎಲ್ರಿಗೂ ಸಿಕ್ಕಿದ್ರೆ ನಮಗೆ ಸಿಕ್ಕಿದ ಹಾಗೆ.

ನೂರು ಜನರಿಗೆ ಸಿಕ್ಕಿದ್ರೆ ನಮಗೆ ಸಿಕ್ಕಿದ ಹಾಗೆ.

ಹಾಗಾಗಿ ನಾವು ಪರಮಾತ್ಮನಲ್ಲಿ ಶರಣಾಗತರಾಗಿರ್ಬೇಕು.

ಕೇಳಿದ್ರೆ ಎಷ್ಟಾದ್ರೂ ಅದು ಅಲ್ಪ ಆಯ್ತು.

ಅಪ್ಪಾ, ನಮಗೆ ಮೋಕ್ಷ ಕೊಡ್ಬೇಕೂಂತ್ಹೇಳಿ. ಅವ್ನಿಗೆ ಗೊತ್ತಿಲ್ವ . . .

ನಾವು ಕೇಳಿದ ಕೂಡ್ಲೆ ಏನಾಯ್ತು . . .

ಅವನನ್ನು ಸ್ವಲ್ಪ . . .

ನಮ್ದೇ ಅಹಂ ಆಯ್ತು. ಪ್ರಾರ್ಥನೆ ಮಾಡಿಯಪ್ಪ . . .  ನೀನೇ ಶರಣಾಗತಿ.

ನಾವು ಕೇಳಿದ ಕೂಡ್ಲೇ ಅವನನ್ನ . . .

ನಾವು ಬರೇ . .  ನೀನೇ . . . ಅಂತ್ಹೇಳಿ.

ಇವ ನೀನೇ ಆಗಿಬಿಟ್ಟೆ.

ಧ್ಯಾನ ಮಾಡುವವನು ಧ್ಯಾನದಿಂದ ಧ್ಯಾನ ಮಾಡಲ್ಪಡುವವನೇ ಆದಾಗ.

ಆಮೇಲೆ ಅವನಿಗೆ ಗೊತ್ತಿಲ್ಲ.

ಅಲ್ಲಿ ಪರಮಾತ್ಮನ ಅನುಗ್ರಹ ಸಿಕ್ತದೆ. ಮುಂದೆ ದಾರಿ . . .

ಪರಮಾತ್ಮನ ಅನುಗ್ರಹಕ್ಕಾಗಿ ಇದೆಲ್ಲಾ ಬೇಕು. ನೀನೇ ಅಂತ್ಹೇಳಿ . . . ಹೇಳುವಾಗ ನಾನು ಏನಾಯ್ತು?

ಎಲ್ಲಾ ನೀನೇ.

ಹಾಗಾದ್ರೆ ಇವ ಬೇರೆ ಉಂಟಾ?

ಎಲ್ಲವೂ ಒಟ್ಟು ನೀನೇ. ಎಲ್ಲವೂ . . .

ನಾನು ಇದ್ದುಕೊಂಡು ನೀನೇ ಅಂತ್ಹೇಳಿದ್ರೆ ಅವ . . .

ಇದು ಬಿಟ್ಟು ಬಿಡ್ಲಿ. ಭಯ ಬರ್ತದೆ. ಭಯದಿಂದ ಆಚೆಗೆ ಬದುಕು ಉಂಟು.

ದೇವರ ಭಯವೇ ಜ್ಞಾನದ ಆರಂಭಾಂತ ಹೇಳ್ತಾರೆ. . . . ಅಲ್ಲಾ . . . .

ಅದೇ . . .  ನಮ್ಗೆ ಮಾತ್ನಾಡಿ ಅಭ್ಯಾಸ ಇಲ್ಲ. ಪ್ರವಚನಗಾರರು ನಾವು ಏನಲ್ಲ. ಆದ್ರೂ . . . ಕೆಲವು ವಿಚಾರ ಆವಾಗಾವಾಗ ಬರ್ತದೆ ಅದು . . .

ನಿನ್ನೆ ಮಹಾಭಾರತದಲ್ಲಿ ಒಂದು ಇದ್ರಲ್ಲಿ ಹಾಗೇ ಬಂದಿತ್ತು. ಆವಾಗ ನಾವು ಏನೂ ಒಂದು ಸಣ್ಣ . . .

ಕೃಷ್ಣ ಅರ್ಜುನನಿಗೆ ಎಲ್ಲಾ ಹೀಗೆ ಹೀಗೆ ಹೇಳಿದ್ದಾನೆಲ್ಲ. ನಿನ್ನ ಕರ್ತವ್ಯ ಮಾಡು. ಎಲ್ಲಾ ಹೇಳಿದ್ದಾನೆ. ಆಖೇರಿಗೆ ಏನು ಹೇಳಿದ . . . ಏನು ಹೇಳಿದ . . .  ನಿನ್ಗೆ ಹೇಗೆ ಬೇಕೋ . . .

ಆ ಶ್ಲೋಕ ಬರೋದಿಲ್ಲ.

ಪಟ್ಟಾಭಿ – ಯಥೇಚ್ಛಸಿ ತಥಾ ಕುರೂಂತ್ಹೇಳಿ.

ಅಜ್ಜ – ಅಂದ್ರೆ.

ಪಟ್ಟಾಭಿ – ನಿನ್ಗೆ ಇಷ್ಟ ಬಂದ ಹಾಗೆ ಮಾಡು.

ಅಜ್ಜ – ನೋಡಿ. ಹಾಗಾದ್ರೆ ಹಿಂದೆ ಹೇಳಿದ್ದೆಲ್ಲ . . .

ಪರಮಾತ್ಮನ ಬುದ್ಧಿವಂತಿಕೆ ಅಂದ್ರೆ ಅದು. ಅಲ್ಲಿ ಉಂಟು ನೋಡಿ. ಅವ ಅಧಿಕಾರಿಯಲ್ಲ. ಹ್ಞಾಂ . . . ಅಧಿಕಾರವನ್ನು ಇವನಿಗೇ ಕೊಟ್ಟ. . . .

ಮೊದ್ಲು ಹೇಳಿದ ಹೀಗೆ ಹೀಗೆ . . . ಆಖೇರಿಗೆ ನಿನ್ಗೆ ಹ್ಯಾಗೆ ಬೇಕೋ ಹಾಗೇಂತ . . . ನೋಡಿ. ಅರ್ಜುನ ಸೋತ ಅಲ್ಲಿ.

ಇವ ಹೇಳಿದ್ದನ್ನು ಮಾಡದೇ ಉಪಾಯ ಇಲ್ಲ ಅವ್ನಿಗೆ.

ಅದೇ ರೀತಿ ಶರಣಾಗತಿಯಲ್ಲಿ ಶರಣಾಗೋದು ಮಾತ್ರ ನಮ್ಮ ಕೆಲ್ಸ.

ಮತ್ತೆ ಅವ ಹ್ಯಾಗೆ ಬೋಕೋ ಹಾಗೆ ಮಾಡ್ಲಿ.

ನಾವ್ಯಾರು? ಮೋಕ್ಷ ಬೇಕೋ. ಅದು ಬೇಕೋ ಕೇಳಿಕ್ಕೆ ನಾವು ಯಾರು?

ಅದೇ . . . ನಾನು ಯಾರು ಎಂದು ಶೋಧನೆಯನ್ನು ಮಾಡಿದಾಗ. ನಾನುವಿನ ಅಸ್ತಿತ್ವ ಹೋದಾಗ ಆನಂದ ಪ್ರಾಪ್ತಿ.

ದೇಹದಲ್ಲೊಬ್ಬ ಇದ್ದಾನಲ್ಲ. ಜೀವಾತ್ಮನ ಪರಮಾತ್ಮನ ಯಾವುದೋ ಗೊತ್ತಿಲ್ಲ. ಒಂದು ಶಕ್ತಿ ಉಂಟು. ಆ ಶಕ್ತಿಗೆ ತನ್ನ ಇರುವಿಕೆಯ ಅರಿವಾದಾಗ ಆ ಇರುವವನ ಅಸ್ತಿತ್ವ ಹೋದಾಗ . . . ಏನಂತೆ . . . ಮೋಕ್ಷ ಪ್ರಾಪ್ತೀಂತ ಹೇಳ್ಳಿಕ್ಕೆ ಅವನಿದ್ದಾನ ಅಲ್ಲಿ. ಆನಂದವನ್ನು ಅನುಭವಿಸಿ ಆನಂದವೇ ಆದಾಗ ಆನಂದದ ವಿಚಾರ ತೆಗೀಲಿಕ್ಕೆ ಅಲ್ಲಿ ಅವ ಇಲ್ಲ. ಆನಂದವೇ ಆಗಿಬಿಟ್ಟ.

ನೀರಿನಲ್ಲಿ ಬಿದ್ದವ ಏನಾಗಿಬಿಟ್ಟ. ನೀರಿನಲ್ಲಿ ಬಿದ್ದಾಂತ ಹೇಳ್ಳಿಕ್ಕೆ ಅವ ಇದ್ದಾನ? ಅದನ್ನೇ . . . ಇಂತಹ ಸತ್ಸಂಗಗಳಲ್ಲಿ ಇಂತಹಾ ವಿಚಾರಗಳನ್ನು ಮಾತಾಡ್ತಾ ಮಾತಾಡ್ತಾ ಅಳವಡಿಸಿಕೊಂಡಾಗ ಪ್ರತಿಯೊಬ್ಬರಿಗೂ ಇದು ಅನ್ವಯಿಸುತ್ತದೆ.. .

ಜೀವನ ಸಾರ್ಥಕ ಆಯ್ತು.

ಮರತು ಹೋದದ್ದನ್ನ ನೆನ್ಪು ಮಾಡೋದು ಹೊಸ್ತೇನೂ ಇಲ್ಲ.

ಇಂಥದ್ದೆಲ್ಲಾ ಪ್ರಯತ್ನಗಳು. ಅದು ಇದು ಎಲ್ಲಾ ಬೇಕು. ಎಚ್ಚರಿಕೆ ಆಗ್ಬೇಕಲ್ಲಾ ನಮಗೆ. ನಾವು ನಿದ್ರೆಯಲ್ಲಿದ್ದೇವೆ. ಆದ್ರೆ ಎಚ್ಚರಿಕೆ ಆಗಿದೇಂತ ಗ್ರಹಿಸಿಕೊಂಡಿದ್ದೇವೆ. ಅಲ್ಲ. ನಮ್ದು ನಿದ್ರೆ. ಅಂದ್ರೆ . . . ಸುಪ್ತ ಪ್ರಜ್ಞೆ ಜಾಗೃತವಾದಾಗ ಮಾತ್ರ . . . ನಿಜವಾದ ಜಾಗೃತಿ ಅಲ್ಲಿ. ಅಲ್ಲಿ ಏನು ಬೇಕೋ ಅದು ಬರ್ತದೆ. ಕೇಳ್ಳೀಕ್ಕೆ ಇವ ಇಲ್ಲ. ಅದು ಬರ್ತದೆ. ನಾನು ಇರುವವರೆಗೆ ಅವ ಏನು ಬೇಕಾದರೂ ಕೇಳಬಹುದು. ಆ ನಾನುವಿಗೆ ಅಸ್ತಿತ್ವ ಇಲ್ಲ. ಅದನ್ನು ಅವ ಶೋಧನೆ ಮಾಡಿದ ಮತ್ತೆ ಕೇಳುವವ ಯಾರು. ಹೇಳುವವ ಯಾರು. ಪ್ರಶ್ನೆ ಉಂಟಾ? ಉತ್ತರ ಉಂಟಾ? ಯಾವುದು ಉಂಟು ಹೇಳಿ.

ಎಲ್ಲಾ ನಾವೇ. ಪ್ರಶ್ನೆ ಉತ್ತರ ಎಲ್ಲಾ . . . ಒಬ್ನೇ.

ಅವನು ಅಣುರೂಪದಲ್ಲಿ ದೇಹದಲ್ಲಿದ್ದಾನೆ.

ಆ ಅಣುರೂಪದಲ್ಲಿದ್ದ ಜೀವಾತ್ಮನನ್ನು ಕೇಂದ್ರೀಕರಿಸಿ . . . ಅಣೋ . . . ಹ್ಯಾಗೆ?

ಒಬ್ಬರು – ಅಣೋರಣೀಯಾನ್ ಮಹತೋ ಮಹೀಯಾನ್ . . .

ಅಜ್ಜ – ಅದು ಹಾಗುಂಟು? ಈ ಅಣುವೇ ಆಗ್ತದೆ. ಈ ಅಣು ಒಂದು ಉಂಟಲ್ಲ. ಯಾಕೆ? ಹಾಗಾಗ್ಲಿಕ್ಕೆ. . .

ಭ್ರಮರ–ಕೀಟ ನ್ಯಾಯ.

ಆ ಕೀಟವು ಭ್ರಮರವೇ ಆಯ್ತಂತಪ್ಪಾ . . . ಇದು ಏನು ಅವಸ್ಥೆ.

ಕೀಟವು ಭ್ರಮರವಾದದ್ದು ಹೇಗೇಂತ ಹೇಳಿ.

ಹಾಗಾದ್ರೆ ಮನುಷ್ಯನಲ್ಲಿರುವ ಈ ಜೀವಾತ್ಮ ಸಾಧ್ಯ ಇಲ್ವಾ ಹಾಗಾಗ್ಲಿಕ್ಕೆ.

ಯಾಕೆ ನಮ್ಗೆ ಭಯ?

ಕೀಟ ಹೇಗಾಯ್ತು. ಅದು ಬಂಧನಕ್ಕೊಳಪಟ್ಟಿತು.

ನಾವು ಬಂಧನ ಬಂದ ಕೂಡಲೇ ಪ್ರಾರ್ಥನೆ ಮಾಡ್ತೇವಪ್ಪಾ . . . ಬಂಧನದಿಂದ ಬಿಡುಗಡೆಯಾಗ್ಬೇಕೂಂತ್ಹೇಳಿ. . . . ಪರಮಾತ್ಮನಲ್ಲಿ ನಾವು ಇಡೀ ತಪ್ಪಿದ್ದು ಅಲ್ಲಿ.

ಆ ಬಂಧನವನ್ನು ಸ್ವೀಕಾರ ಮಾಡಿಯಪ್ಪಾ.

ಹೇಗೆ ಕೀಟವು ಯಾವರೀತಿ ಸ್ವೀಕಾರ ಮಾಡಿ ಭ್ರಮರವೇ ಆಯ್ತೋ, ಅದೇ ರೀತಿ ನಾವು ಸ್ವೀಕಾರ ಮಾಡಿದಾಗ – ಬೆಳವಣಿಗೆ ಬಂದು . . .

ಇದೇ ನಮ್ಮ ಪ್ರತಿಯೊಬ್ಬರ ಜನ್ಮದ ಉದ್ದೇಶ.

ಡ್ಲಂ . . . ಟೈಮು ಎಷ್ಟಾಯ್ತು?

ಒಬ್ಬರು – ಹನ್ನೆರಡೂವರೆ.

ಅಜ್ಜ – ಇನ್ನೆಷ್ಟು ಟೈಮುಂಟು?

ಒಬ್ಬರು – ನಿಮ್ಗೆಷ್ಟೂ ಟೈಮುಂಟು.

ಅಜ್ಜ – ಎಂತದಪ್ಪಾ . . . . ನೀವು ಕೊಟ್ರೆ ನಮ್ಗೆ ಸಮಯ ಉಂಟು . . .

ಒಬ್ಬರು – ಅಜ್ಜಾ, ನಾವು ಈ ದೇಹಕ್ಕೆ ಬರೋದಕ್ಕಿಂತ ಮುಂಚೆ ಆನಂದದ ಸ್ಥಿತಿಯಲ್ಲಿದ್ವಾ? ದೇಹ ಹೊತ್ಕೊಂಡು ಬರೋದಿಕ್ಕೆ ಮುಂಚೆ ನಾವು ಆನಂದವೇ ಆಗಿದ್ವಿ. ಮತ್ತೆ ಯಾಕೆ ಬಂದ್ವಿ? ಸುಮ್ನಿರಕ್ಕಾಗದೆ!

ಅಜ್ಜ – ಈ ಪ್ರಶ್ನೆ ಕೇಳಿದವರು ಯಾರೀಗ . . .  ಅಲ್ಲಲ್ಲ . ಸ್ವಲ್ಪ ಪರಿಚಯ. . .  ಈಗ ಅಜ್ಜನ ಪರಿಚಯ ನಿಂಗೆ ಸಿಕ್ಕಿತು. ಅಜ್ಜಾ ಅಂತ ಹೇಳ್ತಿ. ನಾವು ಒಪ್ಪೋದಿಲ್ಲ . . .  ಅಜ್ಜನ ದೇಹದಲ್ಲಿರುವವರು ನಾವು. ಅಪ್ಪಾ . . .  ಪ್ರಶ್ನೆ ಕೇಳಿದವರು ಯಾರು?

ಒಬ್ಬರು –  ನಾನೇ!

ಅಜ್ಜ –  ಅಂದ್ರೆ . . .  ಅದೇ ನಾನೂ ಕೇಳೋದು. ಇಲ್ಲಿ ಬಂದು ನಾನು ಉಂಟು. ಅದ್ಯಾವ ನಾನು.

ಒಬ್ಬರು –  ಆದ್ರೆ ಅದು ಗೊತ್ತಿಲ್ವಲ್ಲ.

ಅಜ್ಜ –  ಗೊತ್ತಿಲ್ಲ . . .  ಹ್ಞಂ . . .  ನಾನೂಂತ ಹೇಳ್ಳಿಕ್ಕೆ ಗೊತ್ತುಂಟಾ . . .  ಗೊತ್ತುಂಟು . . .  ಅದು ಮರೆ ಉಂಟು ಈಗ. ನಾನು ಮಾತನಾಡಿದ್ದೇನೆ. ನಾನು ಪ್ರಶ್ನೆ ಕೇಳಿದ್ದೇನೇಂತ ಗೊತ್ತುಂಟು. ಇಲ್ಲವಾದರೆ ಕೇಳ್ಳಿಕ್ಕೇ ಇಲ್ಲ. ಆ ಪ್ರಶ್ನೆಯನ್ನು –  ನಿನ್ಗೆ ವ್ಯಕ್ತಿಗತವಾಗಿ ನಾವು ಮಾತನಾಡುದಲ್ಲ. ಆ ನಾನುವಿನ ವಿಚಾರ ಹೇಳೋದು –  ನಾವು ಆನಂದದಲ್ಲಿ ಇದ್ದೆವು. . . .  ಹ್ಞಂ.

ಒಬ್ಬರು –  ಆಮೇಲೆ ಬಂದ್ವಿ. ಯಾಕೆ ಬಂದದ್ದು?

ಅಜ್ಜ –  ಯಾವಾಗ ಬಂದದ್ದು?

ಒಬ್ಬರು –  ನೆನಪಿಲ್ಲ.

ಅಜ್ಜ –  ಆದ್ರೂ . . .  ನೆನಪು ಮಾಡ್ಲಿಕ್ಕೇ ಇರೋದು. ದಾರಿ. . . ನಾವು ಆನಂದದಿಂದ ಬಂದಿದ್ದೇವಂತ ಗೊತ್ತುಂಟಲ್ಲ . . .

ಒಬ್ಬರು – ನೀವು ಹೇಳಿದ್ದೀರ. ನಮ್ಗೆ ಅದೂ ಗೊತ್ತಿಲ್ವಲ್ಲ.

ಅಜ್ಜ –  ನಿಮ್ಗೆ ಯಾವುದು ಗೊತ್ತು. ನಿಮ್ಗೆ ಯಾವುದು ಗೊತ್ತಪ್ಪಾ . . .

ಒಬ್ಬರು –  ನಾನಿದೀನೀಂತ ಮಾತ್ರ ನಂಗೊತ್ತು.

ಅಜ್ಜ –  ಅದೇ ನಮಗೆ ಬೇಕಾದ್ದೀಗ. ಕೆಲವು ಜನ್ರಿಗೆ ಗೊತ್ತುಂಟು. . . . ನಾನಿದ್ದೇನೇಂತ ಗೊತ್ತಿಲ್ಲ. ಸತ್ಸಂಗದಿಂದ ಕಲೀವಂಥ ಪಾಠ ಇದು.

ಒಬ್ಬ ಇದ್ದಾನೆ. ನಾನಿದ್ದೇನೇಂತ ಗೊತ್ತಿಲ್ಲ ಒಬ್ನಿಗೆ. ನಾನಿದ್ದೇನೇಂತ ಗೊತ್ತಾದ್ರೆ ಅವ ಡೀಪ್ ಆಲೋಚನೆಗೆ ಇಳ್ದ. ನಾನ್ಯಾರೂಂತ್ಹೇಳಿ. ಒಂದೇ ಶಬ್ದ. ಎಲ್ಲಿ . . .  ಧ್ಯಾನಕ್ಕಿಂತ ಮೊದಲೇ ಇದು.

ಧ್ಯಾನ ನಾವು ಮಾಡ್ತಾ ಉಂಟು. ಯಾರನ್ನು .  ನಿನ್ನನ್ನು.

ಧ್ಯಾನ ಮಾಡಲ್ಪಡುವವ ನೀನು –  ಪರಮಾತ್ಮ.

ಧ್ಯಾನ ಮಾಡುವವ ಯಾರು –  ನಾನು. ಯಾರು? ಇದು ನಿಶ್ಚಯ ಆಗದೆ ಆ ಧ್ಯಾನಕ್ಕೆ ಮಹತ್ವ ಬರೋದಿಲ್ಲ. ಇದು ನಿಶ್ಚಯ ಆದಕೂಡಲೇ ಧ್ಯಾನ . .  ಕ್ರಮ, ಬಾಕಿ ವಿಚಾರಗಳೆಲ್ಲಾ ಉಂಟು ಧ್ಯಾನಕ್ಕೆ.

ಇದು ಆಖೇರಿ ಸ್ಥಿತಿ. ನಾವು ಇಲ್ಲಿಗೆ ಬರೋದು . . .

ಯಾರು ಧ್ಯಾನ –  ನಾನು ಧ್ಯಾನ ಮಾಡ್ತೇನೆ.

ನಾನು ಪ್ರಬಲನಾಗಿ ಇದ್ದುಕೊಂಡು ಧ್ಯಾನ ಮಾಡುವಂಥದ್ದು.

ನೀನು ಪರಮಾತ್ಮ. ಅವನ ವಿಚಾರ ಬೇಡ. ಅವ ಇದ್ದಾನೆ.

ಈ ಧ್ಯಾನ ಮಾಡುವವನು ಯಾರು? ನಾನು. ಯಾರೂಂತ್ಹೇಳಿ.

ಇದಕ್ಕೆ ನಾವು ಶೋಧನಾಂತ . . . .  (ನಗು)

ಯಾರು ಧ್ಯಾನ ಮಾಡುವವ?

ನಾನು.

ಒಪ್ಪತಕ್ಕ ಮಾತೇ . . . . . ..

ಎಲ್ಲವೂ ನೀನೇಂತ ಹೇಳ್ತದೆ. ಅಲ್ಲ.

ಹಾಗಾದ್ರೆ ಈ ನಾನು ಯಾರು? ನೀನೇ.

ಇದು ಅವನೇ ಇದ್ದುಕೊಂಡು ಅಣುರೂಪದಿಂದ –  ನಾನು ನಾನೂಂತ ಹೇಳ್ತಾನೆ. ಪ್ರತಿಯೊಂದು ದೇಹದಲ್ಲಿ ಅಣುರೂಪದಲ್ಲಿ ಇರುವವನು ಅವನೇ. ಆ ಅಣುರೂಪ ನಾನು ನಾನೂಂತ ಹೇಳ್ತದೆ. ಅದು ನೀನೂಂತ ಹೇಳ್ತದೆ. ಆ 'ನೀನು'ವಿಗೆ ಗೊತ್ತು ಹೇಗೆ?

ಹಾಗಾದ್ರೆ ಆ ನಾನುವೇ ನೀನುವಿನ ಈ ರೂಪದಲ್ಲಿ ಇದ್ದುಕೊಂಡು . . .  ಇವನು ಅವನೇ ಆಗ್ತಾನೆ.

ಆಗಿಯೇ ಇದ್ದಾನೆ.

ಹೊಸತ್ತು ಆಗ್ಲಿಕ್ಕೇನಿಲ್ಲ.

ಒಬ್ಬರು –  [D.R.]

ಅಜ್ಜ –  ಆಲೋಚನೆ ಮಾಡುವವ ಯಾರು? ಎಲ್ಲ ಉತ್ತರ ಉಂಟು.. .  ಅದು . . .

ಈ ಆಲೋಚನೆ ಮಾಡುವವ, ಪ್ರಶ್ನೆ ಹಾಕುವವ, ಉತ್ತರ ಹೇಳುವವ ಯಾರು?

ಒಬ್ಬರು –  ಈಗ ಅವನು, ನಾನು ಒಂದೇ ಅಂದ್ರೆ ಯಾಕೆ ಶರಣಾಗತಿ ಮಾಡ್ಬೇಕು?

ಅಜ್ಜ –  ಅವನು ನಾನು ಎರಡು ಉಂಟಾ?

ಒಬ್ಬರು –  ಎರಡೂ ಒಂದೇಂತ ಹೇಳ್ತೀರಲ್ಲಾ!

ಅಜ್ಜ –  ನಾವು ಹೇಳೋದಲ್ಲ. ನಾವು ಹೇಳೋದನ್ನು ನಮ್ಮ ಪಾಲಿಗೆ ಬಿಟ್ಟುಬಿಡಿ. ಬಿಟ್ಟುಬಿಟ್ರೆ ಉತ್ತರ ಸಿಕ್ಕುತ್ತೆ.

ಒಬ್ಬರು – ನಾನೇ ಎಲ್ಲವೂ ಆದ್ರೆ ಶರಣಾಗತಿ ಯಾತಕ್ಕೆ?

ಅಜ್ಜ – ಅದು ನಮ್ಗೆ ಗೊತ್ತಾದ್ರೆ ಬೇಡ. ಇಲ್ಲ. ನಾನು ಪ್ರಬಲವಾಗಿ ಇರುವಾಗ ಅದು ಗೊತ್ತಾಗ್ಲಿಕ್ಕೆ ಸಾಧ್ಯ ಇಲ್ಲ. ಆದ್ರಿಂದ ಶರಣಾಗತಿ ಬೇಕು.

ಒಬ್ಬರು – ಅವನೇ ಈ ನಾನಾಗಿ ಕೆಲ್ಸ ಮಾಡ್ತಾನಲ್ಲ ಆದ್ರಿಂದ ಅವನು ಪ್ರಬಲವಾಗಿರುತ್ತೋ ಅಥವಾ ಅವನ ಇಚ್ಛೆಯೋ . . .

ಅಜ್ಜ – ಏನು ಹೇಳೋದು. ನೋಡಿ ಅದ್ಕೆಲ್ಲಾ ತುಂಬಾ ಟೈಂ ಬೇಕು. . . ಇಂಥಾ ಸನ್ನಿವೇಶಗಳಲ್ಲಿ ಮಾತ್ನಾಡ್ಲಿಕ್ಕಾಗುದಿಲ್ಲ . . . ಅಂದ್ರೆ ಒಂದು ಪಿನ್ ಪಾಯಿಂಟು ಪ್ರಶ್ನೆ ಇಟ್ಟುಕೊಂಡು ಹೋಗ್ಬೇಕು . . . ಯಾವುದು ಆ ಪ್ರಶ್ನೆ ಕೇಳುವವ . . . ಉತ್ತರ ಹೇಳುವವ ಒಂದೇ ಇದ್ರಲ್ಲಿ . . . ಯಾವುದು . . . .

ಒಬ್ಬರು – ಸೇರ್ಬೇಕು.

ಅಜ್ಜ – ಸೇರೋದುಂದ್ರೆ ಜನ ಜನ ಸೇರೋದಲ್ಲ. ಆ ಮನಸ್ಸು ಸೇರಿದಾಗ ನೋಡಿ ಅಲ್ಲಿ. ಎಲ್ಲಿಂದ ಪ್ರಶ್ನೆ ಬರ್ತದೋ ಅಲ್ಲಿಂದಲೇ ಉತ್ತರ ಬರ್ತದೆ ಎಂಬುದು ನಮ್ಮ ಸಿದ್ಧಾಂತ.

ಅದು ನಿಲ್ತದೆ. ಇಲ್ಲವಾದ್ರೆ ಅವ ಏನೋ ಹೇಳಿದಾಂತ್ಹೇಳಿ . . . ಅವನ ಮನಸ್ಸಿಗೆ ಸಮಾಧಾನ ಆಗ್ಬೇಕಾದ್ರೆ ಆ ಮನಸ್ಸನ್ನು ಅಲ್ಲಿ ನಿಲ್ಲಿಸ್ಬೇಕು. ಅವ ಅಲ್ಲಿ ಶೋಧನೆ ಮಾಡ್ಬೇಕು. ಇಲ್ಲಿ ಶೋಧನೆ ಬಂತು. ಇಲ್ಲೀ ತನಕ ಸಾಧನೆ . . .

ಯಾರು ಪ್ರಶ್ನೆ ಕೇಳಿದ್ದು?

ನಾನು

ಯಾರೂಂತ ನಿಶ್ಚಯ ಆಗ್ಲಿ ಮೊದ್ಲು. ಢ್ಣಂ . . .

ಉತ್ತರ ಸಿಗ್ತದಾ? ಆ ಉತ್ತರ ಸಿಗುವಾಗ ಮಾತ್ರ ಪಶ್ನೆ ಇಲ್ಲ. ಯಾವ ಪುಸ್ತಕ ಓದಿದ್ರೂ ಆಗೋದಿಲ್ಲ. . . .

ಹಾಗಾದ್ರೆ ನಿಮ್ಮನ್ನು ನೀವು ತಿಳ್ಕೊಳ್ಳಿಪ್ಪಾ . . .

ಬುದ್ಧಿಯೋ ಮನಸ್ಸೋ ಏನೋ ಎಲ್ಲಾ ನಿಮ್ಗೆ ಪರಮಾತ್ಮ ಕೊಟ್ಟಿದ್ದಾನೆ. ಅದನ್ನು ನಾವು ಉಪಯೋಗ ಮಾಡಿಬಿಟ್ರೆ .

ಅದ್ಕೋಸ್ಕರ ಇಂಥದ್ದೆಲ್ಲಾ . . .

ನಮ್ಗೆ ಕೊಟ್ಟಿದ್ದನ್ನು ನಾವು ಉಪಯೋಗ ಮಾಡ್ಬೇಕು.

ದುರುಪಯೋಗ ಮಾಡಿದ್ರೆ ಅವ್ಯವಸ್ಥೆ. . . .

ಮನಸ್ಸು ಬುದ್ಧಿಯನ್ನು ಕೊಟ್ಟಿದ್ದಾನೆ. ಸರಿಯಾದ ವ್ಯವಸ್ಥೆಯಲ್ಲಿ ಕೊಂಡು ಹೋಗ್ಬೇಕು . . . ಅದನ್ನು ಈ ಪ್ರಪಂಚದಲ್ಲಿ ಸತ್ಯವೋ ಅಸತ್ಯವೋ ಇದರ ಮೇಲೆ ಬಿಟ್ಟಿದ್ದೇವೆ.

ಅದೇ ಮನಸ್ಸು ಅಂತರ್ಮುಖವಾದಾಗ . . .

ಶೋಧನೆಗೆ ಇಳೀತು.

ಇದು ಬಹಿರ್ಮುಖ ಸಾಧನೆ. ಅದು ಪ್ರಕೃತಿ ನಿಯಮ ಪ್ರಕಾರ ಬಂದದ್ದದು. ಇದೂ ಪ್ರಕೃತಿಯೇ ಶೋಧನೆ ಎಂಬುದು.

ಯಾವುದು. . . ಅಲ್ಲಿ ಹೋದಾಗ ಏನಾಯ್ತು . . .

ಇದು ಮೌನದಿಂದ ಇದ್ದುಕೊಂಡು . . . ಅಂದ್ರೆ ಗುಟ್ಟಲ್ಲ . . .

ಅದು ವ್ಯಕ್ತವಾಗಿ ಸಂಭವಿಸಿದ್ರೆ ನೋಡಿ ನೂರಾರು ಜನ್ರಿಗೆ ಪ್ರಯೋಜನ . . . ಅವನು ಅದುವೇ ಆಗಿಬಿಟ್ಟ.

ಆ ಅಣುರೂಪದಲ್ಲಿರುವುದನ್ನು ಜಾಗ್ರತಗೊಳಿಸುವುದೇ ಪ್ರತಿಯೊಂದೂ . . . ಇರೋದು [D.R.]

ಇದೆಲ್ಲಾ ವ್ಯವಹಾರದ ಒಟ್ಟಿಗೇ ಆಗುವಂಥದ್ದು. ವ್ಯವಹಾರವನ್ನು ಬಿಟ್ರೆ ಅವನಿಗೆ ಮತ್ತೆ ಊಟಕ್ಕೆ ಗತಿ . . .

ವ್ಯವಹಾರ ಮಾಡ್ತಾ ಇರುವಾಗಲೇ ನೀವು ಇದನ್ನು ನೋಡಿ.

ಇದೂ ಅದೂ ಒಟ್ಟಿಗೆ ಆಗ್ಲಿ.

ಕತ್ತಲೆಯಲಿ ಬೆಳಕನ್ನು ಕಾಣುವಂಥದ್ದು ಹಾಗೆಯೇ.

ವ್ಯಾವಹಾರಿಕದಲ್ಲಿ ಪಾರಮಾರ್ಥಿಕವನ್ನು ಕಾಣಬೇಕು. ಹಿಮಾಲಯಕ್ಕೇನೂ ಹೋಗೋದು ಬೇಡ. ಹೋಗುವವರು ಹೋಗ್ಲಿ. ನಾವು ಇಲ್ಲಿ ಇದ್ದುಕೊಂಡು ಹಿಮಾಲಯವನ್ನು ಕಾಣುವ. ಸಾಧ್ಯತೆ ಉಂಟು.

ಕತ್ತಲೆಯಲ್ಲಿ ಬೆಳಕನ್ನು ಕಾಣ್ಲಿಕ್ಕೆ ಯಾವಾಗ ಸಾಧ್ಯತೆ ಉಂಟೋ . . . ಹಿಮಾಲಯ ಎಲ್ಲಿ . . . ಸ್ವಲ್ಪ ಆಚೆಗೆ . . . ಅಷ್ಟೇ ಅಲ್ವಾ . . . [D.R.]

ಮುಖ್ಯ ನಾವು ಯಾರೂಂತ್ಹೇಳಿ ಅನುಭವ ಬಂದ್ರೆ ಸಾಕು.

ನಾವು ಹೇಳೋದೀಗ ಅವರು ಇವರು . . . ಅಜ್ಞಾ . . . ಏನೆಲ್ಲಾ ಎಂಥದು ಇದು?

ಅದೇ . . .

ಇರುವವನಿಗೆ ಇರುವವನ ಅರಿವಾದಾಗ . . .

ಒಬ್ಬ ಇದ್ದಾನೆ. ಇಲ್ದಿದ್ರೆ ಅವನಿಗೆ . . . ಇರುವವನಿಗೆ ತನ್ನ ಇರುವಿಕೆಯ ಅರಿವಾದಾಗ . . . . . . . . ಬೆಳಕಾಗಿ ಸಂಭವಿಸಿತು. ಅದುವೇ ಆನಂದ. ಈ ಆನಂದವನ್ನು ಎಷ್ಟು ವಿವರಿಸ್ಲಿಕ್ಕೆ ಹೊರಟ್ರೂ ಕೂಡ ಅದು ಶಬ್ದಗಳಿಗೆ ಸಿಕ್ಕೋದಿಲ್ಲ. . . . ಶಬ್ದಗಳಿಗೆ ಸಿಕ್ಕಿದ್ರೂ ಕೂಡ ಅಲ್ಪವೇ ಆಯ್ತಪ್ಪಾ . . .

ಅಲ್ಲಿ ನಾವು ಕೈ ಹೀಗೆ ಮಾಡ್ಬೇಕಷ್ಟೇ ಹೊರತು ಮಾತು ನಿಂತು ಹೋಗ್ತದೆ. ಮಾತೇ ಇಲ್ಲ.

ಅಂದ್ರೆ ಮಾತ್ನಾಡುವವನೇ ಇಲ್ಲ. ಇದೆಲ್ಲಾ ಭಾವನೆಗಳು. ಈ ಭಾವನೆಗಳಿಂದ ಪ್ರಪಂಚ ನಡೀತದೆ. ಭಾವನೆಗಳು ಹೋದಾಗ ಪ್ರಪಂಚವೇ . . .

ಮನೋನಿಗ್ರಹಾಂತ ಅಲ್ವಾ.

ಹಾಗಾದ್ರೆ ಉಂಟು. ಮನೋ ನಿಗ್ರಹಾಂತ ಉಂಟು. ನಾವು ಯಾಕೆ ಮಾಡ್ಲಿಕ್ಕೂಡ್ದು. ಮನಸ್ಸೇ ಪ್ರಶ್ನೆ ಹಾಕೋದು. ಮನಸ್ಸೇ ಉತ್ತರ ಹೇಳೋದು. ಎಲ್ಲಾ ಮನಸ್ಸಿನ ಆಟಗಳು. ಮನಸ್ಸಿನ ಆಟ ಹೋದ ಕೂಡ್ಲೇ ಅವನಿಗೆ ವಿಶ್ರಾಂತಿ ಆಯ್ತು ಸ್ವಲ್ಪ.

ಅವ ರಿಟೈರಾದ ಈ ಪ್ರಪಂಚದಿಂದ.

ಅವ ಮತ್ತೆ ವೀಕ್ಷಕನಾಗಿ ನೋಡ್ತಾನೆ ಪ್ರಪಂಚವನ್ನು ಅಪ್ಪಾ . . .

ದೇಹದಲ್ಲಿದ್ದುಕೊಂಡು ದೇಹಾತೀತ.

ಸಂಸಾರದಲ್ಲಿದ್ದುಕೊಂಡು ಸಂಸಾರದಿಂದ ನಿವೃತ್ತಿ . . .

ಪ್ರಪಂಚದಲ್ಲಿದ್ದುಕೊಂಡು ನಿವೃತ್ತಿ . . .  ಆಖೇರಿ.

ಅದಕ್ಕೋಸ್ಕರ ನಾವು ಪ್ರಪಂಚಕ್ಕೆ ಪ್ರಾಧಾನ್ಯತೆಯನ್ನು ಕೊಡ್ಬೇಕು. ಒಂದು ವೇಳೆ ಪ್ರಪಂಚ ಅಸತ್ಯಾಂತ ಆದ್ರೆ . . . ಅಸತ್ಯದಲ್ಲಿ ಸತ್ಯವನ್ನು ಕಾಣಬೇಕು . . .  ಅಸತ್ಯಕ್ಕೆ ಮಹತ್ವ ಕೊಡದಿದ್ರೆ ಸತ್ಯವನ್ನು ಕಾಣುವುದು ಹೇಗೆ? ಹ್ಞಾಂ . .

ಶಂಕರಾಚಾರ್ಯರು ಏನು ಹೇಳಿದ್ದಾರಂತೆ . . .  ಜಗತ್ತು ಮಿಥ್ಯ.

ನಮ್ಗೆ ಏನು ಕಾಣ್ತದೆ. ಅದಕ್ಕೆ ತದ್ವಿರುದ್ಧ. ಜಗತ್ತೇ ಸತ್ಯಾಂತ ಹೇಳಿ. ಅಲ್ವ. ಶಂಕರಾಚಾರ್ಯರು ಹೇಳಿದ್ದಾರೆ ಸರಿ. ನಾವು ನಡಿಯೋದು ಹೇಗೆ? ಅವರು ಏನೋ ಹೇಳಿದ್ದಾರೆ . . . ಇದೇ ಯಾರು ಏನು ಭಾಷಣ ಕೊಟ್ರೂ ಬರೋದು ಇದೇ . . . ಕೃಷ್ಣ  . . .

ಹಾಗಾದ್ರೆ ಅಸತ್ಯವನ್ನು ಸತ್ಯಾಂತ ಭಾವಿಸಿದ್ದೇವೆ. ಹಾಗಾದರೆ ಸತ್ಯವೆಂದು ಭ್ರಮಿಸಿದ ಈ ಸತ್ಯವು ಅಸತ್ಯಾಂತ ಗೊತ್ತಾದಾಗ ಸತ್ಯದ ಅರಿವಾಗ್ತದೆ ನೋಡಿ. . .  ಸತ್ಯದ ಅರಿವಾದಾಗ ಮಾತ್ರ ಇದು ಅಸತ್ಯವೆಂದು ಅರಿವಾಗುವುದು. ಅದೆರಡು ಸಂದಿಗ್ಧ.

ಕತ್ತಲೆ ಹೋಗುವಂಥದ್ದು. ಬೆಳಕು ಬರುವಂಥದ್ದು. ಅಲ್ಲಿ . . . ಯೋಗ. . . .

ಯೋಗ ಅಂದರೇನು?

ಒಬ್ಬರು –  ಕಣ್ಣಿಗೆ ಕಾಣುವುದನ್ನು ಸತ್ಯ ಅಂತಾರಲ್ಲ . . .

ಅಜ್ಜ –  ಏನಪ್ಪಾ . . . ಕಣ್ಣೀಗೆ ಕಾಣುವುದು ಸತ್ಯ . . .  ಅಲ್ಲಾಂತ ಯಾರಾದ್ರೂ ಹೇಳ್ತಾರ?

ಒಬ್ಬರು –  ಜಗತ್ತೆಲ್ಲಾ ಕಾಣತ್ತ. ಅಸತ್ಯಾಂತ ಹೇಳ್ತೀರಿ. . .

ಅಜ್ಜ –  ಹೌದು. ಶಂಕರಾಚಾರ್ಯರು ಹೇಳಿದ್ದಂತೆ . . .  ಅಥವಾ . . .  (ನಗು) . . . [D.R.]

ಶಂಕರಾಚಾರ್ಯರು ಹೇಳ್ಳಿಲ್ಲ. ಇದು ಮಿಥ್ಯಾಂತ ನಂಬಬೇಕೂಂತ ಹೇಳ್ಳಿಲ್ಲ ಶಂಕರಾಚಾರ್ಯರು.

*****